# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



Scan For Digital Colourful
Hampi Times E-paper



www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com



ಸಂಪುಟ:01 Volume:01 • ಸಂಚಿಕೆ:257 Issue:257 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 08.03.2024 08.03.2024 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2


ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ.ವಿ.ಜಿ.

## ಮಾ.12 ರಂದು ಸ್ವಯಂ ಸೇವಕ ಗೃಹರಕ್ಷಕರ ಸಂದರ್ಶನ

**ಹಂಪಿ ಟೈಮ್ಸ್ ಹೊಸಪೇಟೆ**
ವಿಜಯನಗರ ಜಿಲ್ಲಾ ಗೃಹರಕ್ಷಕ ದಳದ ನೂತನ ಸ್ವಯಂ ಸೇವಕ ಗೃಹರಕ್ಷಕರ ನೋಂದಣಿಗಾಗಿ ಜಿಲ್ಲಾ ಗೃಹರಕ್ಷಕ ದಳದಲ್ಲಿ ಪ್ರಸ್ತುತ ಖಾಲಿ ಇರುವ ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಹಡಗಲಿ, ಹರಪನಹಳ್ಳಿ ಹಾಗೂ ಕೊಟ್ಟೂರು ಘಟಕಗಳಲ್ಲಿನ 144 ಸ್ವಯಂ ಸೇವಕ ಗೃಹರಕ್ಷಕ/ಗೃಹರಕ್ಷಕಿಯರ ನೋಂದಣಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಸ್ವೀಕರಿಸಿದ್ದು, ಈ ನೋಂದಣಿಯ ಮುಂದಿನ ಭಾಗವಾಗಿ ಸಂದರ್ಶನವನ್ನು ನಡೆಸಲಾಗುವುದು. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಮಾರ್ಚ 12 ರಂದು ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಸಮಾದೇಷ್ಟರ ಕಚೇರಿ ಗೃಹರಕ್ಷಕ ದಳ, ಜಿಲ್ಲಾ ಒಳಾಂಗಣ ಕ್ರೀಡಾಂಗಣ ಹತ್ತಿರ, ಹೊಸಪೇಟೆ ಕಚೇಗೆ ಹಾಜರಾಗಲು ತಿಳಿಸಿದೆ.

ವಿಶೇಷವಾಗಿ ಕೌಶಲ್ಯ ತರಬೇತಿ (ಕಂಪ್ಯೂಟರ್ ಜ್ಞಾನ, ಹೆವಿ ಡ್ರೈವಿಂಗ್, ಅಡುಗೆ ಭಟ್ಟರು, ಮೆಕಾನಿಕ್, ಪೈಂಟರ್ ಮತ್ತು ಪ್ಲಂಬರ್), ಎನ್.ಸಿ.ಸಿ ಹಾಗೂ ರಾಜ್ಯ ಮತ್ತು ರಾಷ್ಟಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿದವರಿಗೆ ಮೊದಲ ಆದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೊ ಸಂಖ್ಯೆ. 9844444348, 9481662660, 8277218413, ಸಂಪರ್ಕಿಸಬಹುದು.

# ಮಳೆ ಬೆಳೆ ಇಲ್ಲದಿದ್ದರೂ ಹಂಪಿಗಿಲ್ಲ ಪ್ರವಾಸಿಗರ ಬರ

### ಸಂಸದ ವೈ.ದೇವೇಂದ್ರಪ್ಪ ಹೇಳಿಕೆ। 70 ಕೋಟಿ ರೂ ಪೈಕಿ 26 ಕೋಟಿ ರೂ ಬಿಡುಗಡೆ

### ಕೇಂದ್ರ ಪುರಸ್ಕೃತ ಸ್ವದೇಶ ದರ್ಶನ್ 2.0 ಯೋಜನೆಯಡಿ ಹಂಪಿ-ಮೈಸೂರು ಆಯ್ಕೆ

### ಪ್ರಧಾನಿ ಮೋದಿ ಡೆವಲಪ್‌ಮೆಂಟ್ ಆಫ್ ಟ್ರಾವೆಲ್ಲರ್ ನೂಕ್ಸ್ ವರ್ಚುಲ್ ಚಾಲನೆ



**ಹಂಪಿ ಟೈಮ್ಸ್ ಹೊಸಪೇಟೆ**
ಹಂಪಿಯಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಕೇಂದ್ರ ಪುರಾತತ್ವ ಇಲಾಖೆಯ ನಿಯಮಗಳು ಅಡ್ಡಿಯಾಗಿದ್ದವು. ಈಗ ಕೇಂದ್ರ ಸರ್ಕಾರವೇ ಅಭಿವೃದ್ಧಿಗೆ ಮುಂದಾಗಿದ್ದು, ರಾಜ್ಯದ ಎರಡು ಸ್ಥಳಗಳ ಪೈಕಿ ಹಂಪಿಯೂ ಒಂದಾಗಿರುವುದು ಸಂತಸ ತಂದಿದೆ ಎಂದು ಸಂಸದ ವೈ.ದೇವೇಂದ್ರಪ್ಪ ಹೇಳಿದರು.

ಜಿಲ್ಲಾಡಳಿತ ಹಾಗೂ ಪ್ರವಾಸೋದ್ಯಮ ಇಲಾಖೆ ವಿಜಯನಗರ ಜಿಲ್ಲೆ ಹಾಗೂ ಪ್ರವಾಸೋದ್ಯಮ ಮಂತ್ರಾಲಯ, ಭಾರತ ಸರ್ಕಾರ ಇವರ ಸಹಯೋಗದಲ್ಲಿ ಕೇಂದ್ರ ಪುರಸ್ಕೃತ ಸ್ವದೇಶ ದರ್ಶನ್ 2.0 ಯೋಜನೆಯಡಿ ಹಂಪಿಯ ವಿವಿಧ ಪರಿಸರದಲ್ಲಿ ಡೆವಲಪಮೆಂಟ್ ಆಫ್ ಟ್ರಾವೆಲ್ಲೆರ್ ನೂಕ್ಸ್ ಹಂಪಿ ಯೋಜನೆಯ ಶಂಕುಸ್ಥಾಪನೆಯ ವರ್ಚುವಲ್ ಲಾಂಚ್ ನೇರಪ್ರಸಾರ ಕಾರ್ಯಕ್ರಮವನ್ನು ಗುರುವಾರ ಉದ್ಘಾಟಿಸಿ ಮಾತನಾಡಿದರು. ಈ ಬಾರಿ ಸಕಾಲಕ್ಕೆ ಮಳೆ ಸುರಿಯದ್ದರಿಂದ ಬರಗಾಲ ಎದುರಿಸುವಂತಾಗಿದೆಯಾದರೂ, ಹಂಪಿಗೆ ನಿರೀಕ್ಷೆಗೂ ಮೀರಿ ಪ್ರವಾಸಿಗರು ಆಗಮಿಸುತ್ತಿದ್ದಾರೆ. ಹಂಪಿಗೆ ಪ್ರವಾಸಿಗರ ಬರ ಎಂದೂ ಎದುರಾಗದು. >>4

## ಪದವಿಧರ ಕ್ಷೇತ್ರದ ಸ್ಪರ್ಧಾಕಾಂಕ್ಷಿ ನಾರಾ ಪ್ರತಾಪ್ ರೆಡ್ಡಿಗೆ ಎಎಪಿ ಬೆಂಬಲ

### ಎಎಪಿ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ**
ಲೋಕಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ ಎಎಪಿ ಪಕ್ಷ ಸ್ಪರ್ಧಿಸುತ್ತಿಲ್ಲ. ಬದಲಾಗಿ ಐಎನ್‌ಡಿಐಎ ಒಕ್ಕೋಟವನ್ನು ಬೆಂಬಲಿಸುತ್ತದೆ. ಈ ಹಿನ್ನೆಲೆಯಲ್ಲಿ ಮುಂಬರುವ ವಿಧಾನ ಪರಿಷತ್ ಈಶಾನ್ಯ ಪದವೀಧರ ಕ್ಷೇತ್ರದ ಸ್ವತಂತ್ರ ಸ್ಪರ್ಧಾಕಾಂಕ್ಷಿಯಾಗಿರುವ ನಾರಾ ಪ್ರತಾಪ್ ರೆಡ್ಡಿ ಅವರನ್ನು ಬೆಂಬಲಿಸಲಿದೆ ಎಂದು ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಹೇಳಿದರು.

ಹೊಸಪೇಟೆಯ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೆಹಲಿ ಹಾಗೂ ಪಂಜಾಬ್ ರಾಜ್ಯದಲ್ಲಿ ಆಮ್ ಆದ್ಮಿ ಸರ್ಕಾರ ಆಡಳಿತವಿದೆ. ಅಲ್ಲಿ ಹೆಚ್ಚಿನ ಲೋಕಸಭಾ ಸ್ಥಾನಗಳನ್ನು ಪಡೆದುಕೊಂಡಿದೆ. ಹೀಗಾಗಿ ಕರ್ನಾಟಕದಲ್ಲಿ ಎಎಪಿಗೆ ಸ್ಪರ್ಧಿಸುವ ಅವಕಾಶಗಳಿಲ್ಲ. ಅಲ್ಲದೇ, ವಿಧಾನ ಪರಿಷತ್ ಕ್ಷೇತ್ರ ಗಳ ವ್ಯಾಪ್ತಿ ಹೆಚ್ಚು ಇರುವುದರಿಂದ ನಮ್ಮ ಪಕ್ಷದಿಂದ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಸಾಧ್ಯತೆಗಳು ಇಲ್ಲ. ಈ ಹಿನ್ನೆಲೆಯಲ್ಲಿ ನಾರಾ ಪ್ರತಾಪ್ ರೆಡ್ಡಿ ಅವರನ್ನು ಬೆಂಬಲಿಸಲು ಉದ್ದೇಶಿಸಿದೆ. ಅದರ ನಿಮಿತ್ತ ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳ ಪೈಕಿ ನಾಲ್ಕು ಜಿಲ್ಲೆಯಲ್ಲಿ ಮೊದಲ ಹಂತದ ಪ್ರವಾಸ ನಡೆಸಿ, ಪ್ರತಾಪ್ ರೆಡ್ಡಿ ಪರವಾಗಿ ಪ್ರಚಾರ ನಡೆಸಿದ್ದೇವೆ. ಕಳೆದ ಬಾರಿ ಜೆಡಿಎಸ್‌ನಿಂದ ಸ್ಪರ್ಧಿಸಿ ಕಡಿಮೆ ಅಂತರದಲ್ಲಿ ಸೋತಿರುವ ಪ್ರತಾಪ್ ರೆಡ್ಡಿ ಈ ಬಾರಿ ಪಕ್ಷೇತರರಾರಿ ಜಯಭೇರಿ ಬಾರಿಸುವ ವಿಶ್ವಾಸವಿದೆ ಎಂದರು.

ಪದವೀಧರ ಕ್ಷೇತ್ರದ ಪಕ್ಷೇತರ ಸ್ಪರ್ಧಾಕಾಂಕ್ಷಿ ನಾರಾ ಪ್ರತಾಪ್ ರೆಡ್ಡಿ ಮಾತನಾಡಿ, ವಿಧಾನ ಪರಿಷತ್ ಈಶಾನ್ಯ ಪದವೀಧರ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಚಂದ್ರಶೇಖರ್ ಪಾಟೀಲ ಆಯ್ಕೆಯಾಗಿ 6 ವರ್ಷಗಳ ಅವಧಿ ಪೂರ್ಣಗೊಳ್ಳುತ್ತಿದ್ದರೂ, ಈ ಭಾಗದ ಜನರ ಧ್ವನಿಯಾಗಿಲ್ಲ. ತಮ್ಮ ಹುಮನಾಬಾದ್ ತಾಲೂಕು ಹೊರತಾಗಿ ಇತರೆ ತಾಲೂಕುಗಳಿಗೆ ಅನುದಾನವನ್ನೇ ನೀಡಿಲ್ಲ. ಬಳ್ಳಾರಿ, ವಿಜಯನಗರ ಜಿಲ್ಲೆಗಳಿಗೆ ಅವರು ಒಂದೇ ಒಂದು ಬಾರಿಯೂ ಭೇಟಿ ಮಾಡಿಲ್ಲ. >>4




## ವಚನ ಅರಿವು

# ಬದುಕಿನ ಭಾಷೆ

**ಲಂಚವಂಚನಕ್ಕೆ ಕೈಯಾನದ ಭಾಷೆ,**
**ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ**
**ನಾನು ಕೈ ಮುಟ್ಟಿ ಎತ್ತಿದೆನಾದರೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ,**
**ಅದೇನು ಕಾರಣವೆಂದರೆ, ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ.**
**ಇಂತಲ್ಲದೆ ನಾನು ಅಳಿಮನವ ಮಾಡಿ ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ,**
**ನೀನಾಗಲೆ ಎನ್ನ ನರಕದಲ್ಲಿ ಅದ್ದಿ**
**ನೀನೆದ್ದು ಹೋಗಾ ಶಂಭುಜಕ್ಕೇಶ್ವರಾ.**

**– ಸತ್ಯಕ್ಕ**

ಕಲ್ಯಾಣ ಪಟ್ಟಣದಲ್ಲಿ ಕಸ ಬಳಿಯುವ ಕಾಯಕ ಮಾಡುತ್ತಿದ್ದ ಶರಣೆ ಸತ್ಯಕ್ಕ, ಮನುಷ್ಯ ಹೇಗೆ ಪ್ರಾಮಾಣಿಕತೆಯಿಂದ ಬದುಕಬೇಕು ಎಂಬುದನ್ನು ಈ ವಚನದ ಮೂಲಕ ಹೇಳಿದ್ದಾಳೆ. ವ್ಯಕ್ತಿ ಲಂಚಕ್ಕೆ ಆಸೆ ಮಾಡಿದರೆ, ವಂಚನೆ ಮಾಡಿ ಗಳಿಸಲು ಇಚ್ಛಿಸಿ ಇನ್ನೊಬ್ಬರಲ್ಲಿ ಕೈಯೊಡ್ಡಿ ಬೇಡಿದರೆ ಅವನದು ಸ್ವಾಭಿಮಾನವಿಲ್ಲದ ಭಾಷೆಯಾಗಿದೆ. ನಾಚಿಕೆ, ಮಾನವಿಲ್ಲದ ಬದುಕಾಗಿದೆ. ದಾರಿಯಲ್ಲಿ ಹಣ, ಒಡವೆ, ವಸ್ತ್ರ ಬಿದ್ದಿದ್ದರೆ ಅವನ್ನು ತೆಗೆದುಕೊಳ್ಳಲು ಅವು ನನ್ನ ವಸ್ತುಗಳಲ್ಲ. ಕಳೆದು ಕೊಂಡಿರುವವರ ವಸ್ತುಗಳು ಅಥವ ಆಸೆ ತೋರಿಸುವ ಭ್ರಷ್ಟರ ವಸ್ತುಗಳು. ನನ್ನನ್ನು ಭ್ರಷ್ಟಗೊಳಿಸಲು ಬಂದಿವೆ ಎಂದೇ ಭಾವಿಸುತ್ತೇನೆ. ಒಂದು ವೇಳೆ ಆಸೆಪಟ್ಟು ಬಿದ್ದಿದ್ದ ವಸ್ತುಗಳು ನನಗೆ ಬೇಕೆಂದು ಎತ್ತಿಕೊಂಡರೆ, ತೆಗೆದುಕೊಂಡರೆ ನಾನು ಭ್ರಷ್ಟಳೇ ಸರಿ. ಹಾಗಾಗಿ ಪರವಸ್ತುಗಳಿಗೆ ಆಸೆ ಪಡುವುದಿಲ್ಲ ಎಂದು ಶರಣರ ಮೇಲೆ ಪ್ರಮಾಣೀಕರಿಸುತ್ತಾಳೆ ಶರಣೆ ಸತ್ಯಕ್ಕ. ಈ ವಚನ ನಮ್ಮನ್ನು ಆತ್ಮವಿಮರ್ಶೆಗೆ ಹಚ್ಚುತ್ತದೆ. ನಾವು ನಮ್ಮ ಮನವನ್ನು ಕೇಳಿಕೊಂಡರೆ ನಮ್ಮ ಭ್ರಷ್ಟತೆ ನಮಗೆ ತಿಳಿಯುತ್ತದೆ. ಸ್ವಾಭಿಮಾನಿ ಶಿವಭಕ್ತರು ಶಿವನನ್ನೆ ತಮ್ಮ ಒಡೆಯ ಎನ್ನುತ್ತಾರೆ. ಶಿವನು ಕೊಟ್ಟ ಬದುಕನ್ನು ಪ್ರಸಾದವೆಂದು ತಿಳಿದು, ನಿಷ್ಠೆಯಿಂದ ಕಾಯಕ ಮಾಡಿ ಬಂದಿದ್ದರಲ್ಲಿ ಜೀವನಮಾಡಬೇಕು. ಹೀನ ಮನಸ್ಸಿನಿಂದ ಇನ್ನೊಬ್ಬರ ಹಣ, ವಸ್ತುಗಳಿಗೆ ಆಸೆ ಮಾಡದೆ ಬದುಕಬೇಕು. ಈ ವಚನ ನಮ್ಮ ಬದುಕಿನ ಭಾಷೆಯಾಗಿದೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ನ್ಯಾನೋ ಕಥೆ

# ಹಾರರ್

1. ಸುಂದರಿ

ರಾತ್ರಿ ಸಮಯದಲ್ಲಿ ಗಾಡಿಯಲ್ಲಿ ಗೆಳೆಯನ ಮನೆಗೆ ಹೊರಟವನಿಗೆ ಮಾರ್ಗ ಮಧ್ಯೆ ಗಾಡಿ ಕೈ ಕೊಡಲು ಗಾಡಿ ಅಲ್ಲೆ ಬಿಟ್ಟು ಮೊಬೈಲ್ ಬೆಳಕಿನಲ್ಲಿ ನಡೆಯುತ್ತಿದ್ದವನಿಗೆ ಎದುರಿಗೆ ಸಿಕ್ಕ ಸುಂದರಿಯು ಅವನ ಮೊಗವ ದಿಟ್ಟಿಸುತ್ತಾ ಆತನ ಕೈ ಹಿಡಿದು ವಿಕಾರವಾಗಿ ನಗಲು ಅವಳ ಬದಲಾದ ರೂಪಕ್ಕೆ ಹೆದರಿದವನು ದೊಡ್ಡದಾಗಿ ದೇವರ ನಾಮ ಹೇಳುತ್ತಾ! ಅವಳಿಂದ ಕೈ ಬಿಡಿಸಿಕೊಂಡು ಜೋರಾಗಿ ಓಡುತ್ತಲೇ ಗೆಳೆಯನ ಮನೆ ತಲುಪಿದ.

2. ಕೆಂಪು

ಆಕೆ ಅಂದು ಮನೆಯಲ್ಲಿ ಒಂಟಿ. ಹೆದರಿ ಮಲಗಿದವಳಿಗೆ ನಿದ್ರೆ ಬಾರದೆ ಹೊರಳಾಡಿದಳು. ಬಿಕ್ಕಳಿಗೆ ಬಂದು ನೀರು ಕುಡಿಯಲು ನೋಡಿದರೆ ಪಕ್ಕದಲ್ಲಿ ನೀರು ಇಟ್ಟುಕೊಳ್ಳಲು ಮರೆತಿದ್ದಳು. ರೂಮಿನಿಂದ ಹೊರ ಬಂದು ಅಡುಗೆ ಮನೆಯಲ್ಲಿರುವ ಫ್ರಿಜ್ ನ ಬಾಗಿಲು ತೆಗೆದವಳಿಗೆ ಏನೋ ದ್ರವ ಕೈಗೆ ಅಂಟಿದಂತಾಗಿ ದೀಪ ಹಾಕಿ ನೋಡಲು ಕೈಗೆ ಅಂಟಿದೆ ಕೆಂಪು ರಕ್ತ. ಹೆದರಿ ತಿರುಗಿ ನೋಡಲು ಮೂಲೆಯಲ್ಲಿ ಕಂಡಿತು ಕಪ್ಪನೆಯ ಆಕೃತಿ. ಅದನ್ನು ನೋಡಿ ಅವಳು ಹೆದರಿ ಮೂರ್ಛೆ ಹೋದಳು.

3.ಭಯದ ಸಾವು

ತನಗೆ ಭಯವಿಲ್ಲವೆಂದು ಗೆಳೆಯರ ಮುಂದೆ ಹೇಳಿ ಧೈರ್ಯ ದಿಂದ ಓಡಾತ್ತಿರುವ ಹುಡುಗ ಒಂದು ದಿನ ರಾತ್ರಿ ಕಾನನದ ಮಧ್ಯ ನಿರ್ಜನ ಪ್ರದೇಶದಲ್ಲಿ ನಡೆಯುವಾಗ ಜೋರಾಗಿ ಗಾಳಿ ಬೀಸಲು, ಮೈಯಿಂದ ಬೆವರಿನ ಹನಿ ಜಾರಿ ಬೀಳುತ್ತಿರಲು ಸುತ್ತಲೂ ಕತ್ತಲಾವರಿಸಿರಲು , ದೂರದಲ್ಲೇಲ್ಲೋ ಒಂಟಿ ಮನೆಯಿಂದ ಬೆಳಕು ಕಾಣುತ್ತಿರಲು ಇನ್ನೇನು ಆ ಮನೆಯ ಕಡೆ ಹೋಗಬೇಕು ಎಂದು ಓಡಲು ಕಾಲುಗಳನ್ನೆತ್ತಿದವನು ಗಾಳಿಗೆ ಬಿದ್ದ ಎಲೆಗಳ ಸಪ್ಪಳಕ್ಕೆ ಹೆದರಿ ಭಯದಿಂದ ಕೆಳಗೆ ಬಿದ್ದವನು ಮತ್ತೇ ಮೇಲೆ ಏಳಲೇ ಇಲ್ಲ.

**– ಸುವರ್ಣಾ ಭಟ್ಟ**

**ಬರಹಗಾರರ ಒತ್ತಾಸೆಯ ಮೇರೆಗೆ ಬೆಳಕಿನ ಹಾದಿ ಕಾಲಂ ಆರಂಭಿಸಲಾಗಿದೆ. 250 ಪದಗಳು ಮೀರದಂತೆ ನೀವು ಬರೆದು ಕಳುಹಿಸಬಹುದು. ಯುವ ಬರಹಗಾರರಿಗೆ ವೇದಿಕೆ ಸಿದ್ಧವಿದೆ, ಬರವಣಿಗೆ ನಿಮ್ಮದಾಗಲಿ...**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 9448633038

# ಮಹಿಳಾ ದಿನಾಚರಣೆಯ 1 ಝಲಕ

ಅದೊಂದು ಬೃಹತ್ತಾದ ವೇದಿಕೆ. ದೊಡ್ಡ ಮಠದ ಸ್ವಾಮೀಜಿಗಳು, ಆ ಭಾಗದ ಶಾಸಕರು, ಜಿಲ್ಲಾ ಪಂಚಾಯತ್ ಸದಸ್ಯರು, ಪುರಸಭೆ ಅಧ್ಯಕ್ಷರು ಮತ್ತಿತರ ಘಟಾನುಘಟಿ ರಾಜಕಾರಣಿಗಳು ತಮಗೆ ಮೀಸಲಾಗಿದ್ದ ಕುರ್ಚಿಗಳಲ್ಲಿ ಆಸೀನರಾಗಿದ್ದರು. ಅದು ಸರ್ಕಾರವು ಪ್ರತಿ ವರ್ಷ ನಡೆಸುವ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ನಡೆದ ಕಾರ್ಯಕ್ರಮವಾಗಿತ್ತು.



ಎಂದಿನಂತೆ ಕಾರ್ಯಕ್ರಮ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಸ್ವಾಮೀಜಿಯವರ ಅಮೃತ ಹಸ್ತದಿಂದ ಕಾರ್ಯಕ್ರಮದ ಉದ್ಘಾಟನೆಯ ನಂತರ ಉದ್ಘಾಟನಾ ಭಾಷಣವನ್ನು ಮಾಡಿದ ಅವರು ಹೆಣ್ಣು ಮಕ್ಕಳ ವ್ಯಕ್ತಿತ್ವವನ್ನು ಘನತೆಯನ್ನು ನಮ್ಮ ಹಲವಾರು ಪುಣ್ಯ ಸ್ತ್ರೀಯರ ಕುರಿತಾಗಿ ವಿವರಗಳ ಸಮೇತ ಹೇಳಿದರು. ನಂತರ ಮುಖ್ಯ ಅತಿಥಿಗಳ ಭಾಷಣ. ಮಹಿಳಾ ಸಮಾನತೆ ಕುರಿತಾಗಿ ಉಪನ್ಯಾಸ ನೀಡಿದ ಮುಖ್ಯ ಅತಿಥಿಗಳು ಅವರ ಉಪನ್ಯಾಸವನ್ನು ಮುಗಿಸುವ ಹೊತ್ತಿಗೆ ಸುಮಾರು ಒಂದು ಗಂಟೆ ಕಳೆದು ಹೋಗಿತ್ತು. ಅದಾದ ನಂತರ ಆ ಭವ್ಯವೇದಿಕೆಯಲ್ಲಿ ಆ ವರ್ಷದ ಮಹಿಳಾ ಸಾಧಕರಿಗೆ ಸನ್ಮಾನ ಕಾರ್ಯಕ್ರಮ.

ಅಂತೆಯೇ ಆ ವರ್ಷ ಸನ್ಮಾನಿಸಿಕೊಳ್ಳಲಿರುವ ಮಹಿಳೆಯರನ್ನು ವೇದಿಕೆಯ ಮೇಲೆ ಕರೆಯ ತೊಡಗಿದರು. ಅವರ ಕುರಿತಾದ ಸಂಪೂರ್ಣ ಮಾಹಿತಿಯನ್ನು ಜನರಿಗೆ ಒದಗಿಸಿದರು.

ಈ ಬಾರಿ ಮಹಿಳಾ ದಿನಾಚರಣೆಯಂದು ಸನ್ಮಾನಗೊಳ್ಳಲಿರುವ ನನ್ನನ್ನು ವೇದಿಕೆಗೆ ಕರೆದಾಗ ಅತ್ಯಂತ ಪುಳಕದಿಂದ ಹೋಗಿ ಕುರ್ಚಿಯ ಮೇಲೆ ಕುಳಿತುಕೊಂಡೆ. ಶಾಲು ಹೊದೆಸಿ ಹಾರ ಹಾಕಿ ಸ್ಮರಣಿಕೆಯನ್ನು ನೀಡಿ ಸುತ್ತಲು ನಿಂತು ಪುಷ್ಪವೃಷ್ಟಿ ಗರೆಯುತ್ತಿರಲು ಮಂಗಳವಾದ್ಯಗಳು ಮೊಳಗಿದವು. ಅಷ್ಟರಲ್ಲಿ ಯಾರೋ ನನ್ನ ಕೈ ಹಿಡಿದು ಜಗ್ಗಿದಂತಾಗಲು ಕಣ್ತೆರೆದು ನೋಡಿದರೆ ನಾನಿನ್ನು ಹಾಸಿಗೆಯ ಮೇಲೆ ಮಲಗಿದ್ದೆ. ಒಂದು ಕ್ಷಣ ಅಯೋಮಯವೆನಿಸಿತ್ತು. ನನ್ನ ಮೊಬೈಲ್ ಫೋನಿನ ಕರೆಗಂಟೆ ಮಂಗಳವಾದ್ಯದಂತೆ ಗೋಚರಿಸಿದರೆ ಜಗ್ಗಿದ್ದು ಸಾಕ್ಷಾತ್ ನನ್ನ ಪತಿದೇವರು. ಕೂಡಲೇ ಗಡಬಡಿಸಿ ನನ್ನ ಮೊಬೈಲನ್ನು ಎತ್ತಿ ಕರೆ ಸ್ವೀಕರಿಸಿದರೆ ಅತ್ತಲಿಂದ ಕೆಲಸದಾಕೆ ತನ್ನ ಮಗನಿಗೆ ಹುಷಾರಿಲ್ಲವೆಂದೂ,ತಾನು ಕೆಲಸಕ್ಕೆ ಬರಲಾಗುವುದಿಲ್ಲ ಎಂದೂ ಬಡ ಬಡನೆ ಹೇಳಿ ಫೋನು ಇಟ್ಟಳು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಕನಸಿನಲ್ಲಿ ಸನ್ಮಾನ ಸ್ವೀಕರಿಸುತ್ತಿದ್ದ ನಾನು ರಸ ಭಂಗವಾದಂತಾಗಿ ಎದ್ದು ಕೂತರೆ ಇಲ್ಲಿ ಇನ್ನೊಂದು ಆಭಾಸ. ಆದರೂ ಅನಿವಾರ್ಯವಾಗಿ ಎದ್ದು ಕುಳಿತು ನಿತ್ಯ ವಿಧಿಗಳನ್ನು ಪೂರೈಸಿ ಚಹಾ ಕುಡಿದು ಕೈಯಲ್ಲಿ ಕಸಬರಿಗೆ ಹಿಡಿದು ಇಡೀ ಮನೆಯ ಕಸವನ್ನು ಗುಡಿಸಲಾರಂಭಿಸಿದೆ. ಕಸ ಗುಡಿಸಿದ ನಂತರ ಬಕೆಟ್ ನಲ್ಲಿ ನೀರು ತಂದು ಫಿನಾಯಿಲ್ ಹಾಕಿ ಮನೆಯ ಮೂಲೆ ಮೂಲೆಯನ್ನು ಉಜ್ಜಿ ಉಜ್ಜಿ ನೆಲ ವರೆಸುವ ಹೊತ್ತಿಗೆ ಮುಂಜಾನೆಯ ಉಪಹಾರದ ಸಮಯ ಮೀರಿ ಹೋಗಿತ್ತು. ಮೇಲಿನ ತನ್ನ ಕೋಣೆಯಿಂದ ಮಗ ಅಮ್ಮ, ಇವತ್ತಿನ ಟಿಫನ್ ಏನು?? ಎಂಬ ಕೂಗಿಗೆ 'ನೀನೇ ಬಂದು ಹೋಟೆಲಿನಿಂದ ತಂದು ಕೊಡು' ಎಂದು ಹೇಳಲಷ್ಟೇ ಸಾಧ್ಯವಾಗಿದ್ದು.

ಕೂಡಲೆ ಕಾರ್ಯ ಪ್ರವೃತ್ತನಾದ ಮಗ ಸ್ನಾನ ಮಾಡಿ ಕೆಳಗಿಳಿದು ಬಂದು ಹೋಟೆಲಿಗೆ ಹೋಗಿ ತಿಂಡಿ ಕಟ್ಟಿಸಿಕೊಂಡು ಬಂದ. ಬಿಸಿ ಬಿಸಿ ಇಡ್ಲಿ, ವಡ ಹೊಟ್ಟೆ ಗಿಳಿದಾಗ ಅಬ್ಬಾ!! ಬಹಳಷ್ಟು ಸಮಾಧಾನವಾಯಿತು. ಮತ್ತೆ ಅಡುಗೆ ಮನೆಗೆ ಹೋಗಿ ಹಿಂದಿನ ದಿನದ ಎಲ್ಲ ಪಾತ್ರಗಳನ್ನು ಹೊರಗೆ ತೆಗೆದುಕೊಂಡು ಹೋಗಿ ಎಲ್ಲವನ್ನು ತಿಕ್ಕಿ, ತೊಳೆದು ಸ್ವಸ್ಥಾನ ಸೇರಿಸುವಷ್ಟರಲ್ಲಿ ಸಾಕಾಗಿ ಹೋಯಿತು. ನಂತರ ಬಟ್ಟೆಯ ಸರದಿ. ಮನೆಯ ಎಲ್ಲಾ ಸದಸ್ಯರ ಬಟ್ಟೆಗಳನ್ನು ನೆನೆ ಹಾಕಿ ಒಗೆದು ಹಿಂಡಿ ಹರವಿದ ನಂತರ ಸ್ನಾನ, ಪೂಜೆ ಪೂರೈಸಿ ಅಡುಗೆ ಮನೆಗೆ ಬಂದರೆ ಹೊಟ್ಟೆ ಸಣ್ಣದಾಗಿ ಚುರುಗುಡುತ್ತಿತ್ತು.

ಪಲ್ಯ, ಕಾಳಿಗೆ ಒಗ್ಗರಣೆ ಹಾಕಿ ಅನ್ನ ಸಾರು ಮಾಡಿ ರೊಟ್ಟಿಗೆ ಹೆಂಚು ಇಟ್ಟು ಎಲ್ಲರಿಗೂ ಬಿಸಿ ಬಿಸಿ ರೊಟ್ಟಿ ಬಡಿದು ಕೊಟ್ಟು ಊಟ ಮಾಡಿ ತುಸು ವಿಶ್ರಾಂತಿ ಪಡೆಯಲು ಮಲಗಿದಾಗ ಮಧ್ಯಾಹ್ನದ ಮೂರೂವರೆ.

ಇದು ನಮ್ಮ ಮಹಿಳೆಯರು ತಿಂಗಳಲ್ಲಿ ಮೂರು ನಾಲ್ಕು ಬಾರಿ ಅನುಭವಿಸುವ ಮಹಿಳಾ ದಿನಾಚರಣೆಯ ಒಂದು ಝಲಕು.

ಈ ವರ್ಷ ನನ್ನ ಮಹಿಳಾ ದಿನಾಚರಣೆ ಹೀಗೆ ಪ್ರಾರಂಭವಾಗಿ ಕೊನೆಯಾಯಿತು.... ಖೇದವೇನಿಲ್ಲ ಆದರೆ ಅಭ್ಯಾಸ ಆಗಿ ಹೋಗಿದೆ. ನಿಮ್ಮ ಮಹಿಳಾ ದಿನಾಚರಣೆ ಹೇಗಿತ್ತು ತಿಳಿಸಿ ಸ್ನೇಹಿತರೆ!?

# ವೀರಶೈವ ಲಿಂಗಾಯತ ಮಠಾಧೀಶರಿಂದ ಸಿಎಂ ಸಿದ್ದರಾಮಯ್ಯಗೆ ಸನ್ಮಾನ



**■ ಹಂಪಿ ಟೈಮ್ಸ್ ಹೊಸಪೇಟೆ**

ವಿಶ್ವ ಬಸವ ಧರ್ಮ ಟ್ರಸ್ಟ್, ಅನುಭವ ಮಂಟಪ - ಬಸವಕಲ್ಯಾಣ, ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಹಾಗೂ ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ವತಿಯಿಂದ ಮುಖ್ಯಮಂತ್ರಿಗಳಿಗೆ ಸನ್ಮಾನಿಸಲಾಯಿತು.

ಹುಬ್ಬಳ್ಳಿಯ ಮೂರುಸಾವಿರ ಮಠದ ಶ್ರೀ ಜಗದ್ಗುರು ಗುರು ಸಿದ್ದರಾಜಯೋಗೀಂದ್ರ ಮಹಾ ಸ್ವಾಮೀಜಿ , ಜಗದ್ಗುರು ಬಸವಜಯ ಮೃತ್ಯುಂಜಯ ಮಹಾಸ್ವಾಮಿಗಳು, ಜಗದ್ಗುರು ಡಾ.ಮಾತೆ ಗಂಗಾದೇವಿ, ಜಗದ್ಗುರು ಸಿದ್ದರಾಮೇಶ್ವರ ಮಹಾಸ್ವಾಮಿಗಳು, ಷ.ಬ್ರ.ರಾಜೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಸೇರಿ 160 ಮಂದಿ ಶರಣ ಗುರುಗಳು ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿದ್ದರು.

ಬಸವಕಲ್ಯಾಣ ಅನುಭವ ಮಂಟಪದ ವಿಶ್ವ ಬಸವ ಧರ್ಮ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ನಾಡೋಜ ಡಾ॥ ಬಸವಲಿಂಗ ಪಟ್ಟದೇವರು ಮತ್ತು 150 ಕ್ಕೂ ಹೆಚ್ಚು ಶರಣಗುರುಗಳು, ಸ್ವಾಮೀಜಿಗಳು ಉಪಸ್ಥಿತರಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹರಸಿದರು.

ಕಾರ್ಯ ಕ್ರಮವನ್ನು ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರು ಹಾಗೂ ಶಾಸಕ ರಾದ ಡಾ. ಶಾಮನೂರು ಶಿವಶಂಕರಪ್ಪ ಉದ್ಘಾಟಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಅಖಿಲ ಭಾರತ ವೀರಶೈವ ಮಹಾಸಭಾದ ಮಹಾಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಈಶ್ವರ್ ಖಂಡ್ರೆ ಅವರು ವಹಿಸಿದ್ದರು. ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಬಿ. ಆರ್.ಪಾಟೀಲ್,

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷರಾದ ಡಾ. ಗೊ.ರು. ಚನ್ನಬಸಪ್ಪ, ಬಸವ ಸಮಿತಿಯ ಅಧ್ಯಕ್ಷರಾದ ಡಾ. ಅರವಿಂದ ಜತ್ತಿ , ಬೃಹತ್ ಕೈಗಾರಿಕಾ ಸಚಿವರಾದ ಎಂ.ಬಿ.ಪಾಟೀಲ್, ಪೌರಾಡಳಿತ, ಹಜ್ ಸಚಿವರಾದ ಶ್ರೀ ರಹೀಖಾನ್,

ಮಾಜಿ ಸಚಿವರಾದ ಶ್ರೀ ರಾಜಶೇಖರ ಪಾಟೀಲ, ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ್, ವಿಜಯ್ ಸಿಂಗ್, ಶಾಸಕ ಚನ್ನಾರೆಡ್ಡಿ ಸೇರಿ ಹಲವು ಪ್ರಮುಖರು ಉಪಸ್ಥಿತರಿದ್ದರು. ವಿಶ್ವಬಸವ ಧರ್ಮ ಟ್ರಸ್ಟ್‌ನ ಹಾಗೂ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಮತ್ತು ಲಿಂಗಾಯತ ಮಠಾ ಧಿಪತಿಗಳ ಒಕ್ಕೂಟದ ಎಲ್ಲಾ ಪದಾಧಿಕಾರಿಗಳ ಸಮ್ಮುಖದಲ್ಲಿ ವೈಭವದ ವೇದಿಕೆಯಲ್ಲಿ ಮುಖ್ಯಮಂತ್ರಿಗಳು ಸನ್ಮಾನಿಸಲ್ಪಟ್ಟರು.

# ಕುಡಿಯುವ ನೀರು ಶೀಘ್ರದಲ್ಲೆ ಚಾಲನೆ



**■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ವಿವಿಧ ಗ್ರಾಮಗಳಲ್ಲಿ, ಅನೇಕ ಕಾಮಗಾರಿಗಳಿಗೆ ಶಾಸಕ ಕೆ.ನೇಮಿರಾಜ್‌ನಾಯ್ಕ್ ಭೂಮಿಪೂಜೆ ನೆರವೇರಿಸಿದರು.

ಬಳಿಕ ಅವರು ಮಾತನಾಡಿ, ಪಟ್ಟಣ ಸೇರಿ ಕೊಟ್ಟೂರು ಹಾಗೂ ಕೂಡ್ಲಿಗಿ ಪಟ್ಟಣಗಳ ಜನಸಂಖ್ಯೆಗನುಗುಣವಾಗಿ ಕುಡಿಯುವ ನೀರಿನ ಯೋಜನೆಗೆ ಟೆಂಡರ್ ಕರೆಯಲಾಗಿದ್ದು, ಶೀಘ್ರದಲ್ಲೇ ಯೋಜನೆಗೆ ಚಾಲನೆ ನೀಡಲಾಗುತ್ತೆ ಎಂದರು. ನನ್ನ ಅವಧಿಯಲ್ಲಿ ಮೂಲಭೂತ ಸೌಲಭ್ಯಗಳಿಗೆ ಉತ್ತೇಜನ ನೀಡಲು ಯೋಜನೆಗಳ ಅನುಷ್ಠಾನ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡುವೆ. ಕೆಕೆಆರ್‌ಡಿಬಿ, ಡಿ.ಎಂ.ಎಫ್, ಕೆ.ಎಂ.ಆರ್.ಸಿ ಯೋಜನೆಯಡಿ 38.94 ಕೋಟಿ ರೂ.ಗಳ ವೆಚ್ಚದ ಯೋಜನೆಗಳಗೆ ಚಾಲನೆ ನೀಡಲಾಗುತ್ತಿದ್ದು, ಇಂದಿನ ಬನ್ನಿಗೋಳ ಜಾಕ್‌ವೆಲ್‌ನಿಂದ ಮೂರು ಪಟ್ಟಣಗಳಿಗೆ ಅಂದಿನ ಜನಸಂಖ್ಯೆಗನುಗುಣವಾಗಿ ಕುಡಿಯುವ ನೀರು ಪೂರೈಕೆಮಾಡಲಾಗಿದೆ. ಆದರೆ, ಈ ಯೋಜನೆ ಪ್ರತ್ಯೇಕ ಪೈಪ್‌ಲೈನ್ ಮೂಲಕ ಕುಡಿಯುವ ನೀರು ಒದಗಿಸಲಾಗುವುದು ಎಂದರು.

ಮಾಲವಿ ಜಲಾಶಯಕ್ಕೆ ಶಾಶ್ವತ ನೀರಿನ ಯೋಜನೆ ಮಾಡುವ ಮೂಲಕ ವ್ಯವಸಾಯಕ್ಕೆ ಬಳಸಿಕೊಳ್ಳುವ ಸದಾವಕಾಶವನ್ನು ಕಲ್ಪಿಸೋಣ ದುರಂತ ಎಂದರೆ ಯಾರೋಮಾತು ಕೇಳಿ ಜಲಾಶಯದ ಕಾಲುವೆಗಳ ಗೇಟ್ ಮುರಿದು ಡ್ಯಾಂ ಬರೀದುಮಾಡಿದ ಪುಣ್ಯ ಕಟ್ಟಿಕೊಳ್ಳುವವರ ಯೋಚನೆಗಳಿಗೆ, ಗೇಟ್ ರಿಪೇರಿ ಕಾಲುವೆಗಳ ಹೂಳೆತ್ತುವ ಕೆಲಸಕ್ಕೆ 4ಕೋಟಿ ರೂ.ಗಳ ಕ್ರಿಯಾಯೋಜನೆಗೆ ಹಣ ಮಂಜೂರು ಆಗಿದೆ. ಗ್ರಾಮಗಳಲ್ಲಿ ವಾಸ್ತವ್ಯ ಇದ್ದು, ಅವರ ಸಮಸ್ಯೆಗಳಿಗೆ ಹಾಗೂ ಗ್ರಾಮಾಭಿವೃದ್ಧಿಗಾಗಿ ಸ್ಪಂದಿಸುವೆ ಎಂದರು.

ತಾಲೂಕಿನ ಬೆಣಕಲ್ಲು ಗ್ರಾಮದಿಂದ ಕಲ್ಲಳ್ಳಿ ತಾಂಡದವರೆಗೂ ರಸ್ತೆ ಅಭಿವೃದ್ಧಿ ಕಾಮಗಾರಿ, ಹನಸಿ ಗ್ರಾಮದಲ್ಲಿ ಸಿಸಿ ರಸ್ತೆ, ರಾಯರಾಳು ತಾಂಡದಲ್ಲಿ ಸಿಸಿ ರಸ್ತೆಗಳು ಸೇರಿದಂತೆ ನಾನಾ ಗ್ರಾಮಗಳಲ್ಲಿ ಹೈಮಾಸ್ಕ್ ಲೈಟ್‌ಗಳ ಅಳವಡಿಕೆಗೆ ಒಟ್ಟು 3894.09 ಲಕ್ಷ ರೂ.ಗಳು ವೆಚ್ಚದಲ್ಲಿ ಈ ಸಂದರ್ಭದಲ್ಲಿ ಮುಖಂಡರಾದ ಎಪಿಎಂಸಿ ಮಾಜಿ ಅಧ್ಯಕ್ಷ ಕೆ.ರೋಹಿತ್, ಹಲಗಾಪುರ ಗ್ರಾ.ಪಂ.ಸದಸ್ಯೆ ಪತ್ರ್ಯಾದೇವಿಬಾಯಿ, ಬದಾಮಿ ಮೃತ್ಯುಂಜಯ, ಕನ್ನಿಹಳ್ಳಿ ಚಂದ್ರಶೇಖರ್, ಹನಸಿ ಸಿದ್ದೇಶ, ಜಯಪ್ರಕಾಶ್, ಹೊಸಕೆರೆ ವೀರೇಶ, ರಾಮಣ್ಣ, ನಾಗರಾಜ್, ಕಜ್ಜಿ ರಮೇಶ್, ಪೀರ, ಹೋಟಲ್ ಸಿದ್ದರಾಜು, ಜಿ.ಎಂ.ಜಗದೀಶ, ಬ್ಯಾಟಿ ನಾಗರಾಜ್, ಭಂಗ್ಯಾನಾಯ್ಕ್, ಕೆ.ಉಮೇಶ್‌ನಾಯ್ಕ್, ಪತ್ರ್ಯಾಗುರ್‍ಯಾನಾಯ್ಕ್, ಬಿ. ಕುಮಾರ್‌ನಾಯ್ಕ್, ಯಮನನಾಯ್ಕ್, ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ರಾಜೇಂದ್ರ, ಶಾಸಕರ ಆಪ್ತ ಸಹಾಯಕರಾದ ದೊಡ್ಡಬಸಪ್ಪ ರೆಡ್ಡಿ ಸೇರಿದಂತೆ ಅನೇಕರು ಇದ್ದರು.

## ಕವಿ ಮನಸು

### ಆನು ಒಲಿದಂತೆ

ನೀನೊಲಿದ
ಬೇಡನಿಗೆ ಹೊರತಲ್ಲ ಎನ್ನ ಬಕುತಿ
ಮೂದಳದ ಬಿಲ್ವ ಎಲೆಗಳ
ಹೊರತು ಕೊಡಲಿಲ್ಲ ಶಕುತಿ

ಭವಣೆಯಲಿ ಹಣ್ಣಾದ ಮನವು
ನೀನಿತ್ತ ಬದುಕಿಗೆ ಮಣಿದ ಕಾಯ
ಕೊಡಲೇನಿದೆ ಉಸಿರುಸಿರಿಗು ಶಿವ'ನ
ಹೊರತಾದ ಸೊಲ್ಲು

ಅಲ್ಲೆಲ್ಲೊ ಗುಡಿಯೊಳಗೆ
ಹುಡುಕುತಿಹ ಮಂದಿ
ನೀನು ನನ್ನವರ ಜೊತೆ ಗುಡಿಸಲೊಳಗೆ
ಬಂಧಿ.
ಚಿಂದಿ ಕೌದಿಯೊಳಗೆ ದಿನವೂ
ಏಕಾದಶಿಯ ಮಂದಿ
ಕೊಡಲೇನಿದೆ
ಬಯಲ ಸೂರ್ಯನ ಹೊರತು

ಇಂದು ಶಿವರಾತ್ರಿ
ಕಣ್ಣ ಹನಿಗಳ ತುಂಬಾ
ನಿನ್ನವೇ ಬಿಂಬ
ಅಲ್ಲೇ ಅರ್ಚನೆಗೈವೆ,
ಕಣ್ಣೀರಲೇ ಮಹಾ ಮಜ್ಜನ
ಕೊಡಲೇನಿದೆ ಹಸಿವ ಬಿತ್ತಿ
ಬದುಕ ಸುಟ್ಟ ಬೂದಿಯ ಹೊರತು

ನನ್ನವರ
ಕರುಳ ಕೂಗೇ ಮಹಾ ಮಂತ್ರಾರ್ಚನೆ
ಕಂಗಳ ಗುಳಿಯಲಿ ಆಸೆಯ ಹೊಳಪಿತ್ತ
ಕರುಳಿನ ಜೊತೆಗಾರ ನಿನಗೆ
ಕೊಡಲೇನಿದೆ ಹಸಿವಿನ ಹೊರತು

– ಭಾರತಿ ಅಶೋಕ್

### ಹೆಣ್ಣಿನ ಸಾಧನೆ

ನಾಲ್ಕು ಗೋಡೆಯ ಮಧ್ಯೆ ಇದ್ದ ನಾರಿ
ತೋರಿಸಿದ್ದಾಳೆ ತನ್ನ ಸಾಮರ್ಥ್ಯ ಏನೆಂದು
ಬಾನಿಗೆ ಹಾರಿ
ಅವಳಿಲ್ಲದೆ ಜಗದ ಚರಾಚರವೂ ಇಲ್ಲ
ಎದುರು ನಿಂತರೆ ನಾಶಮಾಡುವಳು ಎಲ್ಲ

ಮನೆಯ ಒಲೆಯ ಮುಂದಷ್ಟೆ ಅಲ್ಲ ಅವಳ
ಜಾಗವು
ರಾಷ್ಟ್ರ ರಾಜಕಾರಣದಿ ಬಂದು
ಮುನ್ನೆಡೆಸುತ್ತಿರುವಳು ಈ ಜಗವನು
ಮಗು ಹೆತ್ತು ಪಾಲಿಸಿ ಬೆಳೆಸುವ ಕರ್ತವ್ಯದ
ಜೊತೆಗೆ
ರಾಕೆಟನ್ನು ಸೃಷ್ಟಿಸಿ ಮಂಗಳ ಚಂದ್ರನತ್ತ
ಕಳಿಸುವಳು ನಭದೆಡೆಗೆ

ಪುರುಷನಿಂದಷ್ಟೇ ಅಲ್ಲ ಈ ಸೃಷ್ಟಿಯು
ಹೆಣ್ಣಿರದಿದ್ದರೆ ಎಲ್ಲವೂ ನಶ್ವರವು
ಜಗದ ಸೌಂದರ್ಯಕ್ಕೆ ಕಾರಣವು ಹೆಣ್ಣು
ಜರಿಯಬೇಡಿ ಅವಳನ್ನು ಕರೆದು ಹುಣ್ಣು

ಪೆಣ್ಣು ಪೆಣ್ಣು ಎಂದು ಹೀಗಳೆದವರ
ಮುಂದೆ
ತನ್ನ ಸಾಧನೆ ಹಿಮಾಲಯದ ಎತ್ತರ
ಎಂದು ಸಾರಿದಳು
ನಿನ್ನ ಕೈಲಾಗಲ್ಲ ಎಂದು ಜರಿದವರ
ಮುಂದೆ
ಯುದ್ಧ ವಿಮಾನ ಓಡಿಸಿ ಗೆದ್ದು
ತೋರಿಸಿದಳು

ಸೃಷ್ಟಿಯ ಪಾಲಿನಲ್ಲಿ ಹೆಣ್ಣೂ ಇರುವಳು
ಅದ ಒಪ್ಪಿ ಗೌರವಿಸಿ ಅವಳೂ
ಮನುಜಳೆಂದು

– ಸುಜಾತ ಗಿಡ್ಡಪ್ಪಗೌಡ್ರ ಶಿಕ್ಷಕಿ

ಮೈಮೇಲೆ ಹರಿದ ಬಟ್ಟೆ ಇದ್ದರೂ
ಚಿಂತೆಯಿಲ್ಲ, ಕೈಯಲ್ಲೊಂದು
ಕನ್ನಡ ದಿನಪತ್ರಿಕೆ ಇರಲಿ
ಡಿ.ವಿ.ಜಿ.




# ಸ್ತ್ರೀ ಸೂಕ್ಷ್ಮ ಸಂವೇದನಾ ಕಾದಂಬರಿ

ಇತ್ತೀಚಿಗೆ ನಾನು ಓದುತ್ತಿರುವ ಅನೇಕ ಲೇಖನ, ಪುಸ್ತಕಗಳಲ್ಲಿ, ತೇಜಸ್ವಿ ಪುಸ್ತಕಗಳ ನಂತರ, ಲೇಖಕಿ ಶ್ರೀಮತಿ ಸುಧಾಮೂರ್ತಿ ಕೃತಿಗಳೇ ಬಹುಪಾಲು. ಅವರ ಬಹುಪಾಲು ಕೃತಿಗಳು ಸಾಮಾಜಿಕ ಕಳಕಳಿಯ ಜೊತೆ, ಮಹಿಳೆಯರ ಬದುಕು–ಬವಣೆಗಳ ಮೇಲೆ, ಸಾಮಾಜಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವಂತಹವು. ಮಹಿಳೆಯರು ಅನುಭವಿಸುವ, ಅನುಭವಿಸಬಹುದಾದ ಸಮಸ್ಯೆಗಳನ್ನು ನಮ್ಮೆದುರು ತರುವಂತಹವು. ಅವರ ಅನುಭವ ವೇಧ್ಯವಾದ ಬರವಣಿಗೆಯ ಓಘ, ಸುಲಭವಾಗಿ ಎಲ್ಲರೂ ಅರ್ಥೈಸಿಕೊಳ್ಳುವಂತಹುದೇ ಆಗಿರುತ್ತದೆ.

ಬನ್ನಿ ಅಂತಹ ಮಹಿಳೆಯ ಸೂಕ್ಷ್ಮ ಸಂವೇದನೆಯನ್ನು ತಿಳಿಸುವ ಅವರ,"ಋಣ"ಕಾದಂಬರಿಯ ಬಗ್ಗೆ ತಿಳಿಯುತ್ತಾ, ನಮ್ಮ ಸುತ್ತಲಿನ ಸಾಮಾಜಿಕ ಆಗುಹೋಗುಗಳನ್ನು ಸೂಕ್ಷ್ಮವಾಗಿ ಮನೋ ಅವಲೋಕನ ಮಾಡಿಕೊಳ್ಳೋಣ.

ಸುಧಾ ಅಮ್ಮ, "ಋಣ" ಕಾದಂಬರಿಯ ಬಗ್ಗೆ ಅವರೇ ಹೇಳಿರುವಂತೆ;– "ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಅವಕಾಶ ಸಿಗದಂತಹ ಭಾಗವ್ವನಂಥಹ ಸಾವಿರಾರು ಭಾರತೀಯ ಸ್ತ್ರೀಯರಿಗೆ ಕಂಬನಿಯ ಅರ್ಪಣೆ" ಎಂದಿದ್ದಾರೆ.

ನಿಜ. ಕೃಷ್ಣತೀರದ "ಶೂರ್ಪಾಲಿ" ಊರಿನ ಭಾಗಿರಥಿ ಅನಾಥೆಯಾಗಿ, ಸೋದರಮಾವನಾದ ಪೋಸ್ಟ್ ಮಾಸ್ಟರ್ ತಮ್ಮಣನ ಮನೆಯಲ್ಲಿ ಬೆಳೆದವಳು. ಭಾಗಿಯಾಗಿದ್ದ, ಭಾಗೀರಥಿ ಮದುವೆ ನಂತರ, ಭಾಗವ್ವಳಾದಳು. ಸಂಸಾರದಲ್ಲೂ ಮತ್ತೊಬ್ಬರ ಮಾತಿಗೆ ಕಟ್ಟುಬಿದ್ದು , ಮಿಥ್ಯವೇ ಸತ್ಯವಾಗಿ, ಎಲ್ಲಾ ನೋವು ನುಂಗಿ, ಮಗ ಶಂಕರ ಮಾಸ್ತರನ ಕೆಲಸದ ಊರಾದ ಶಿಗ್ಗಾವಿಯಲ್ಲಿ, ನೋವು ಅಡವುಗಚ್ಚಿ ಅನಾಥಳಾಗಿ ಬದುಕುತ್ತಿದ್ದವಳು 'ಭಾಗವ್ವಾ'. ಇದು ಸುಧಾ ಅಮ್ಮ, "ಋಣ" ಕೃತಿಯ ಮಧ್ಯ ಭಾಗದಲ್ಲಿ ಬರುವ ಕಾದಂಬರಿಯ ಎಳೆ.

ಋಣ ಕಾದಂಬರಿಯ ಎಳೆ ಆರಂಭವಾಗುವುದೇ, ಬೆಂಗಳೂರಿನ ನಿವಾಸಿ, ಬ್ಯಾಂಕ್ ಉದ್ಯೋಗಿ ವೆಂಕಟೇಶನಿಗೆ , ಹುಬ್ಬಳಿಗೆ ಟ್ರಾನ್ಸಫರ್ ಆಗುವವುದರಿಂದ. ಬ್ಯಾಂಕ್ ಉದ್ಯೋಗಿ ವೆಂಕಟೇಶರ ಕುಟುಂಬವೆಂದರೆ ಶ್ರೀಮತಿ ಶಾಂತಿ& ಶ್ರೀವೆಂಕಟೇಶ& ಮತ್ತವರ ಮಕ್ಕಳಾದ ಸಾಫ್ಟ್‌ವೇರ್ ನ ರವಿ ಮತ್ತು ,ಬಡವರ ಸೇವೆಗಾಗಿಯೇ ಎಂ.ಬಿ.ಬಿ.ಎಸ್.ಓದುತ್ತಿರುವ ಮಗಳು ಗೌರಿ.

ಹಾಗೆ ನೋಡಿದರೆ ವೆಂಕಟೇಶರಿಗೆ ಕೆಲಸದ ಅಗತ್ಯವೇ ಇಲ್ಲ. ಮನೆಯ ವ್ಯವಹಾರವೆಲ್ಲಾ ಪತ್ನಿ ಶಾಂತಿಯದೇ. ಶಾಂತಿ ತನ್ನ ತಂದೆ ಸೂರ್ಯನಾರಾಯಣರಾಯರಂತೆ ಪಕ್ಕಾ ವ್ಯವಹಾರಸ್ಥೆ. ಲೆಕ್ಕಚಾರವೇ ಅವಳ ಉಸಿರು. ಶಾಂತಿಯಂತೆ ಅವರ ಮಗ ರವಿ, ವ್ಯವಹಾರ ಚತುರ. ಆದರೆ ಮಗಳು ಗೌರಿ, ಮೃದು ಧೋರಣೆ. ತಂದೆ–ಮಗಳು ಇಬ್ಬರೂ ಒಂದೇ.ಭಾವನೆಗಳಿಗೆ ಬೆಲೆಕೊಡುವರು. ಒಲ್ಲದ ಮನಸ್ಸಿನಿಂದ ಹುಬ್ಬಳ್ಳಿಗೆ ಹೋದ , ಬ್ಯಾಂಕ್ ಉದ್ಯೋಗಿ ವೆಂಕಟೇಶರಿಗೆ "ಹುಬ್ಬಳ್ಳಿಯೇ ತನ್ನ ಜೀವನದ ಪ್ರಮುಖ ತಿರುವು ಇದಾಗುವುದೆಂದು, ತನ್ನ ತಂದೆಯಾದ ಜೆ.ಎಸ್.ಮಾಧವರಾಯರ ತಾಯಿ, ಇಂದಿರಮ್ಮಳ ಅಸಹಾಯಕವಾದ ಅಮಾಯಕತೆ , ಅಜ್ಜಿ ಚಂಪಕ್ಕಳ ಇನ್ನೊಂದು ನಿಲುವು ಗೊತ್ತೇ ಆಗುವುದಕ್ಕೆ ಅವಕಾಶವಾಗುವುದೆಂದು ಗೊತ್ತಿರಲಿಲ್ಲ. ಯಾವುದೇ ಒಂದು 'ಋಣ'ದ ಎಳೆಯೇ ಅವರನ್ನು ಇಲ್ಲಿಗೆ ಮಾಡಿತು.

ಹುಬ್ಬಳಿಯ ವಾಸ್ತವ್ಯ , ಗೌರಿ ಸ್ನೇಹಿತೆದೆಯಾದ, ಅನಂತಪಾಟೀಲರ ಮನೆಯಲ್ಲಿ. ಒಮ್ಮೆ ಅವರ ಒತ್ತಾಯಕ್ಕೆ ಬೆಲೆಕೊಟ್ಟು, ಅವರ ಸಂಬಂಧಿಕರ ಮಗನ ಉಪನಯನಕ್ಕಾಗಿ ಶಿಗ್ಗಾವಿಗೆ ಕರೆದೊಯ್ಯಿತು ಅವರ ಋಣ. ಶಿಗ್ಗಾವಿ ಜನ ಅವರರನ್ನು ," ಶಂಕರ ಮಾಸ್ತರ"ಎಂದೇ ಕರೆದಿದ್ದು, ಹಾಗೆಯೇ ಗುರುತಿಸಿದ್ದು, ಎಲ್ಲಾ ಪದರಪದರ ಘಟನೆಗಳು, ಮಾತುಗಳು ಬ್ಯಾಂಕರ್ ವೆಂಕಟೇಶ ಅವರನ್ನು, ಅವರಿಗೆ ಗೊತ್ತಿಲ್ಲದ, ರಕ್ತ ಸಂಬಂಧ ಎನ್ನುವ ಋಣದ ಹಿಂದೆ ಹೊಗುವಂತೆ ಮಾಡಿತು. ಶಿಗ್ಗಾವಿಯ ಉಪನಯನಕ್ಕೆ ಉಡುಗೊರೆ ಕೊಡಲು, ಬೆಳ್ಳಿಯ ಅಂಗಡಿಗೆ ಹೋದಾಗ,ಅಲ್ಲಿನ ಮಾಲಿಕರು ವೆಂಕಟೇಶರನ್ನು ನೋಡಿ 'ಮಾಸ್ತರ' ಎಂದಿದ್ದು, ಓಣಿಯ ಅನೇಕ ಜನರೂ ಗುರುತು ಹಿಡಿದು ಮಾತನಾಡಿಸಿದ್ದು, ಹುಬ್ಬಳಿಯ ಅನೇಕ ಅಂಗಡಿಯಲ್ಲೂ, ಅನೇಕರು ಇವರನ್ನು ಶಂಕರಮಾಸ್ತವರಾಗಿಯೇ ಕರೆದಿದ್ದು, ಇವರ ಆಶ್ಚರ್ಯಕ್ಕೆ ಕಾರಣವಾಗಿ ಅದರ ಜಾಡು ಹಿಡಿದು ಹೊರಟಾಗ , ಅವರಿಗೆ ಸಿಕ್ಕವರೇ 'ಭಾಗವ್ವ'.

ಅದನ್ನೇ ತಿಳಿದುಕೊಳ್ಳಲು, ವೆಂಕಟೇಶರಾಯರು ಭಾಗವ್ವನನ್ನು ಕಾಣಲು ಶಿಗ್ಗಾವಿಗೆ ಹೋದ ದಿನ, ಅನಿರೀಕ್ಷಿತವಾಗಿ ಶಂಕರಮಾಸ್ತರರ ತಂದೆಯ ವರ್ಷದ ಕಾರ್ಯ. ಅಲ್ಲಿನ ಮನೆಯಾದರೂ ಎಂಥದು? ಬಡತನವೇ ಮೈವೆತ್ತಿ ತಾಂಡವವಾಡುತ್ತಿತ್ತು. ಆದರೂ ಅಲ್ಲಿನ ಶ್ರದ್ದೆ, ಗೌರವಕ್ಕೆ ಬಡತನವಿರಲಿಲ್ಲ. ಅಲ್ಲಿ ಅವರ ಕಿವಿಗೆ ಬಿದ್ದ ,ಆ ಹೆಸರುಗಳ, ಗೋತ್ರ ಪಠಣದಿಂದ ಇವರು ಚಕಿತಾರಾದರು. ಕಾರಣ ಅವರ ತಂದೆ ಹೆಸರು ಸೇತುಮಾಧವನಾಗಿದ್ದು ,ಇಲ್ಲಿ ಸೇತುಶರ್ಮ ಆಗಿತ್ತು. ಉಳಿದಂತೆ ಅಜ್ಜ, ಮುತ್ತಜ್ಜನ ಹೆಸರು ಎಲ್ಲಾ ಒಂದೇ!!!

ನಂತರ ವೆಂಕಟೇಶರಾಯರು ತಾನೂ, ಶಂಕರಮಾಸ್ತವರ ಪರಿಪೂರ್ಣ ಹೋಲಿಕೆ ಹೇಗೆ ಸಾದ್ಯ ಎಂದು ಕೇಳಿದಾಗ ಏನೂ ಹೇಳಿಯಾಳು.? ಭಾಗವ್ವನಿಗೆ ನಿಜಕ್ಕೂ ಗೊತ್ತಿರಲಿಲ್ಲ. ವೆಂಕಟೇಶರಾಯರು, ತನ್ನ ಪತಿ ಸೇತುಮಾಧವರ(ಮಾಧವರಾಯರು) 2ನೇ ಪತ್ನಿಯ ಮಗನೆಂದು ಸಹ. ಅಸಲಿಗೆ ಭಾಗವ್ವನಿಗೆ, ತನ್ನ ಗಂಡನಿಗೆ 2ನೇ ಮದುವೆ ಮಾಡಿಸಿದ್ದೇ ಗೊತ್ತಿರಲಿಲ್ಲ. ಎಲ್ಲಾ ರಹಸ್ಯ ಗೊತ್ತಿರುವ ವ್ಯಕ್ತಿ ವೆಂಕಟೇಶರು ಮಾತ್ರ. ಭಾಗವ್ವನ ಬದುಕಿನ ಒಂದೊಂದೇ ಎಳೆ ಬಿಡಿಸುತ್ತಾ ಇರುವಾಗ, ಅಲ್ಲಿ ತಿಳಿದಿದ್ದು, ಅಸಹಾಯಕಿ ಭಾಗವ್ವಳಿಗಾದ ಅನ್ಯಾಯ. ಸೇತುಮಾಧವರು ಸೇತುಶರ್ಮರಾಗಿ , ಶೂರ್ಪಾಲಿಯ ಭಾಗವ್ವಳನ್ನು ಮದುವೆಯಾಗಿದ್ದವರು. ಆದರೆ ಶಿಗ್ಗಾವಿಯಲ್ಲಿ ಅವರು ಬದುಕಿದ್ದಾಗಿನಿಂದ ಶ್ರಾದ್ಧ ಅವರಿಗಾಗುತ್ತಿತ್ತು. ಕಾರಣ ಭಾಗವ್ವ ಗರ್ಭಿಣಿಯಾಗಿದ್ದಾಗ, ಪತಿ ರೈಲು ಸೇತುಮಾಧವರು ದುರಂತದಲ್ಲಿ ಸಾವಿಗೀಡಾಗಿದ್ದ (ಸುಳ್ಳು)ಸುದ್ದಿ. ಅದು ಮರಾಠಿ ಪತ್ರಿಕೆಯಲ್ಲಿ ಬಂದಿದ್ದ ತುಂಡನ್ನು ಭಾಗವ್ವ ತೆಗೆದಿರಿಸಿದ್ದಳು. ತನ್ನ ನೋವಿನ ಕಥೆ ಹೇಳಿ, ಆ ಪತ್ರಿಕಾ ತುಂಡನ್ನು ತೋರಿಸಿ ಹೇಳಿದಳು "ನಮ್ಮ ದೇಶದಾಗ ಯಾವ ಹೆಂಗಸು ಎಂದೂ ಸುಳ್ಳಾ, ಗಂಡ ಇಲ್ಲ ಅಂತಾ ಹೇಳೋದಿಲ್ಲ. ಗಂಡನಿಂದ ದೂರ ಇದ್ರೂ, ಗಂಡ ಛಲ್ಲಿದ್ರೂ ಚಿಂತಿಲ್ಲ ,ಕುಂಕುಮ ಹಚ್ಚಿಕೊಂಡು ಮಂದಿಯೊಳಗ ಮುತ್ತೈದಿ ಅನಿಸ್ಕೊಳ್ಳಾಕ ಪ್ರಯತ್ನ ಮಾಡ್ತಳ. ಅಂಥದ್ರಾಗ ಪೇಪರ್ ನ್ಯಾಗ ಬಂದ ಸುದ್ದಿ ಸುಳ್ಳೇನು? ಅದನ್ನ ನಂಬದಂಗ ಇರದನ ಆಗ್ತದೇನೂ?", ಎಂದು ಪತ್ರಿಕಾಸುದ್ದಿಯನ್ನು ನಂಬಿ, ಅದರಂತೆ ಬಾಳತೊಡಗಿದಳು. ಗಂಡ ಸೇತುಶರ್ಮನು ತೀರ್ಥಯಾತ್ರಗೋ, ಪ್ರವಾಸಕ್ಕೋ ಹೋದಾಗ, ಭಾಗವ್ವಳಲು ಅತ್ತೆ ಚಂಪಕ್ಕಳಿಂದ ಮನೆಯಿಂದ ಹೊರದೂಡಲ್ಪಟ್ಟಳು. ಕಾರಣ ಅವಳ ದೊಡ್ಡದಾದ ಗರ್ಬಿಣಿ ಹೊಟ್ಟೆಯನ್ನು ನೋಡಿ, ಜನರಾಡುತ್ತಿದ್ದ ಕೆಟ್ಟ ಮಾತಿಗೆ ಅವಳು ಬಲಿಯಾದಳು. ಹಸುವಿನ ಸ್ವಭಾವದ ಸೊಸೆ ಮಾತು ನಂಬದ ಅತ್ತೆ ಚಂಪಕ್ಕ, ಜನರ ಕೆಟ್ಟ ಮಾತು ಕೇಳಿ, ಅವಳನ್ನು ವಿಚಾರಿಸದೇ ಗರ್ಭಿಣಿ ಸೊಸೆಯನ್ನು ಅನಾಥೆಯಾಗಿಸಿದಳು. ಸೋದರಮಾವನ ಮನೆಗೆ ಬಂದ ಭಾಗವ್ವ ಅಲ್ಲೂ ಅನಾಥರಕ್ಕೆ ಒಳಗಾದಳು. ಇಲ್ಲಿದ್ದಾಗಲೇ ಗೊತ್ತಾದ ಸುದ್ದಿಯೇ ಪತ್ರಿಕೆಯ ರೈಲು ದುರಂತದಲ್ಲಿ ಭಾಗವ್ವಳ ಗಂಡನ ದುರಂತದ ಸುದ್ದಿ. ನಂತರ ಸೋದರಮಾವನ ಮನೆಯಿಂದ ಹೊರಬಂದು, ಧಾರವಾಡದಶಿಗ್ಗಾವಿಯಲ್ಲಿನೆಲೆನಿಂತು,ಮಗನನ್ನುಶಂಕರಮಾಸ್ತರನ್ನಾಗಿಸಲು ಸಫಲಳಾದಳು.

ಆದರೆ ನಿಜ ವಿಷಯವೆಂದರೆ, ಭಾಗವ್ವನ ಪತಿ ಸೇತುಶರ್ಮನು, ರೈಲು ದುರಂತದಲ್ಲಿ ಬದುಕುಳಿದಿದ್ದು. ನಂತರ ದಿನಗಳಲ್ಲಿ ತಾಯಿಯ ಕಣ್ತಪ್ಪಿಸಿ ಮಾಧವರಾಯರು, ಪತ್ನಿ ಭಾಗವ್ವಳಿರುವ ಊರು ಶೂರ್ಪಾಲಿಗೆ ಕಾಳಜಿ, ಪ್ರೀತಿಯಿಂದ ಪತ್ರ ಬರೆದರು. ಜೊತೆಗೆ ದುಡ್ಡು ಕಳಿಸಿದ್ದರು. ಆದರೆ ಮನಿ ಆರ್ಡರ್ ವಾಪಾಸ್ ಬಂದಿತ್ತು. ಅಲ್ಲಿ ಅವಳಿದ್ದರೆ ತಾನೇ!?ಹೆಂಡತಿಗಾಗಿ ಹುಡುಕಾಡಿದಾಗ, ಭಾಗವ್ವಾ ತನಗೆ ಹೋರಿಸಿದ ಅಪವಾದದ ದುಃಖ ತಾಳದೇ ನದಿಹಾರಿ ಆತ್ಮಹತ್ಯೆ ಮಾಡುಕೊಂಡಳೆಂಬ ಸುದ್ದಿ ತಿಳಿದುಬಂದಿತು. ಅದರೆ ಅವರು ಊರೇ ಬಿಟ್ಟು ಶಿಗ್ಗಾಂವಿಗೆ ಬಂದಿದ್ದರು. ನಂತರ 2 ನೇ ಮದುವೆಗೆ ಒಪ್ಪಿಗೆ ಕೊಟ್ಟು, ಭಾಗವ್ವಳ ಗಂಡ, ಸೇತು ಮಾಧವನು ಇಂದಿರಮ್ಮನನ್ನು ಮದುವೆಯಾಗಿ, ವೆಂಕಟೇಶರಾಯರ ತಂದೆಯಾದನು.



ಲೀಲಾವತಿ ಶಿವನಗೌಡ್ರ, ಅಂಕಸಮುದ್ರ, ಹ.ಬೊ.ಹಳ್ಳಿ

Scan For Digital Colourful HAMPI TIMES E-paper

ಹಾಗಾಗಿಯೇ ಒಂದೇ ಹೋಲಿಕೆ, ಶಿಗ್ಗಾಂವಿಯ ಶಂಕರ ಮಾಸ್ತರರಿಗೂ, ಬೆಂಗಳೂರಿನ ವೆಂಕಟೇಶ ರಾಯರಿಗೆ.

ನಂತರ ವೆಂಕಟೇಶರಾಯರು, ಭಾಗವ್ವನಲ್ಲಿ ಅವರ ಮದುವೆಯ ನೆನಪಿನ ಯಾವುದಾದರೂ ವಸ್ತು ಇದೆಯೇ ? ಎಂದು ಕೇಳಿದಾಗ , ಮದುವೆಯ ಸಮಯದಲ್ಲಿ ,ತನ್ನ ತಂದೆ, ಅವರ ಹೆಸರಾದ ಭಗಿರಥರಾಯರ ಬೆರಳುಂಗುರವನ್ನೇ ಕೊಟ್ಟಿದ್ದಾಗಿ, ಅದರ ಮೇಲೆ, 'ಭ' ಎಂದು ಸಂಸ್ಕೃತದಲ್ಲಿ ಬರೆದುದು ಇದೆ' ಎಂದು ಹೇಳಿದಳು.

ಆದೇ ಇಲ್ಲಿ ಭಾಗವ್ವಳಿಗಾದುದು?? ಅವಳ ಅಸಹಾಯಕತೆಯನ್ನು ತಮ್ಮ ದಾಳವಾಗಿಸಿ, ಅನಾಥೆಯಾಗಿಸಿದ್ದು ಅನ್ಯಾಯವೇ ಆಗಿದೆ. ತಂದೆ–ತಾಯಿಲ್ಲದ ತಬ್ಬಲಿ ಎಂಬ ತಾತ್ಸರವೇ? ಅಥವಾ ಅತ್ತೆ ಚಂಪಕ್ಕನಿಗೆ, ತನ್ನ ಸೊಸೆ ಭಾಗವ್ವಾ ಮದುವೆಯಾಗಿ ಬಂದಾಗ, ಏನೂ ಹೊತ್ತು ತಂದಿರಲಿಲ್ಲವೆಂಬ ಅಸಮಧಾನದ ಕಿಡಿಯೇ? ಭಾಗವ್ವಳ ಸಾಧು ಸ್ವಭಾವದ ಅಸಹಾಯಕತೆಯೇ? ಅಂತೂ ಭಾಗವ್ವ ತನ್ನ ಹದಿನಾರನೇ ವಯಸ್ಸಿನಿಂದ, ಹಲ್ಲುಬಿದ್ದು ವಯಸ್ಸಾದರೂ, ಬಡತನದ ಬೇಗೆಗೆ, ತನ್ನ ನಿಸ್ಸಹಾಯಕತೆಗೆ ಕೊರಗದೇ, ಯಾರನ್ನೂ ದೂರದೇ, ಯಾರಿಗೂ ಕೈಚಾಚದೇ , ಮಗ ಶಂಕರ ಮಾಸ್ತರಿರಿಗೆ ಬೆನ್ನೆಲುಬಾಗಿ ಬದುಕಿದಳು.

ತನ್ನ ಮನೆತನದ ಹಿರಿಯರ ಕಥೆ ಕೇಳಿ ವ್ಯಥಿತರಾದ ವೆಂಕಟೇಶರಾಯರೇ, ನಂತರ ಮಗಳು ಗೌರಿಯೊಂದಿಗೆ ಹಣದ ಸಹಾಯವನ್ನು ಮಾಡುವರು. ಆದರೆ ಇದಕ್ಕೆ ಮನೆಯವರು ಯಾರೂ ಒಪ್ಪುವುದಿಲ್ಲ.

ಆದರೆ ಶಂಕರ ಮಾಸ್ತರರ ಅಸಹಾಯಕ ಪರಿಸ್ಥಿತಿ ನೋಡಿದ್ದ ವೆಂಕಟೇಶರಾಯರಿಗೆ, ಖಂಡಿತಾ ಸಹಾಯ ಮಾಡಲೇಬೇಕಿತ್ತು. ತನ್ನ ಮಗಳು, ಗೌರಿಯೊಂದಿಗೆ ಸಮಾಲೋಚಿಸಿ, ಸಹಾಯ ಮಾಡಹೊರಟರು. ಇದು ತಂದೆಯ ಋಣ ಸಂಧಾಯವಾಗಲೆಂದೇ!? ಖಂಡಿತಾ ಗೊತ್ತಿಲ್ಲ.

ಭಾಗವ್ವಳು ತನ್ನ ಮಗ ಶಂಕರಮಾಸ್ತರರ ತದ್ರೂಪಿ, ವೆಂಕಟೇಶರಾಯರಿಗೂ ಸಹ ತನ್ನ ಮಗನಿಗೂ ಈ ವಿಷ್ಯ ತಿಳಿಬಾರದೆಂದು ಹೀಗೆ ಹೇಳುತ್ತಾಳೆ, " ಈ ಎದಿ ಒಳಗಿನ ಸುದ್ದೀನ ಶಿವನ ಸಾಕ್ಷಿ ಯಾರೂ ಕೇಳಿಯೂ ಇಲ್ಲ, ಇವತ್ತಿನ ವರ್ಗೂ

ಯಾರ ಮುಂದ ಹೇಳಿಲ್ಲ. ನೀವು ಜುಲ್ಮಿ ಮಾಡಿ ಕೇಳ್ದಾಗ ಅಂತಃಕರಣದಿಂದ ಕೇಳೋ ಒಬ್ಬ ಮನುಷ್ಯನಿದ್ದಾನಲ್ಲ ಅಂತ ಹೇಳಿದೆ. ಯಾವ ಜನ್ಮದ ಋಣ ಇತ್ತೋ ಏನೋ. ನಿಮ್ಮ ಮುಂದ ಹೇಳಬೇಕನ್ನಿಸ್ತು. ಶಂಕರಾಗ ತನ್ನ ತಂದಿ ಸತ್ತ ಮ್ಯಾಲ, ಹುಟ್ಟಿದ್ದು ಮಾತ್ರ ನೆನಪಿತ್ತು. ಆದ್ರ ಅವರ ತಂದಿ ನನ್ನ ಯಾವ ಕಾರಣಕ್ಕ ಸಾಯೋಕ್ಕಿಂತ ಮುಂಚೆ, ಬಿಟ್ರು ಅದನ್ನ ಹೇಳಿಲ್ಲ. ಅವನ್ಗ ತಂದಿ ಮ್ಯಾಲ ಭಕ್ತಿ ಅದ. ಶ್ರಾದ್ಧ ತಪ್ದ ಮಾಡ್ತಾನಾ. ನನ್ನ ಬಿಟ್ರೆ ಅದು ನನ್ನ ಮಗನಿಗೆ ತಿಳಿಬಾರ್ದು, ಅಷ್ಟು ನೆಡೆಸಿಕೊಡ್ರಿ" .ಅಂತ ಕೈ ಜೋಡಿಸಿದ ಗೌರವಾನ್ವಿತೆ ಭಾಗವ್ವ.

ದೇವರೂ, ಮಾನವರು ಮಾಡಿದ ಅನ್ಯಾಯವನ್ನು ವಿನೀತಳಾಗಿ ಸ್ವೀಕರಿಸಿದ್ದ ಭಾಗವ್ವ, ಮಗನಿಗಾಗಿ ತನ್ನ ಜೀವನವನ್ನೇ ಗಂಧದಂತೆ ತೇಯ್ದು, ಮಗ ಶಂಕರನನ್ನು ಸಲುಹಿದ ಭಾಗವ್ವ ,ಆಗಾಗ ನೆನಪಾಗುವ ಜೀವ.

ಪ್ರೀತಿಯಿಂದ ಮಾತನಾಡಿಸಲು, ಭಾಗೀರಥಿ–ಭಾಗವ್ವನ್ನ ಕಷ್ಟಗಳನ್ನೇ ಅನುಭವಿಸಿರಬೇಕು ಅಂತಿಲ್ಲ. ಮನದಲ್ಲಿ ವಿವಿಧ ಹೇಳಲಾಗದ ನೋವಿರಿಸಿಕೊಂಡಿರುವ, ಅನೇಕ ಹಿರಿ–ಕಿರಿಯ ಜೀವಗಳು ನಮ್ಮ ನಡುವೆಯೇ ಇರುವರು. ಅವರನ್ನು ಒಮ್ಮೆ ಪ್ರೀತಿಯಿಂದ ಸಾಕು, ಹುದುಗಿದ ಸಂಕಟಗಳು ಆಚೆ ಬಂದು, ಆ ಜೀವಗಳು ಸಮಾಧಾನ ಪಡಬಹುದು.

ಮದುವೆಯಾದ ಸ್ವಲ್ಪ ವರ್ಷಕ್ಕೆ ನಮ್ಮ ತಾತನನ್ನು ಕಳೆದುಕೊಂಡು, ಕೂಟುಕುಟುಂಬದ ಸಾಥ್, ಮನೋಬೆಂಬಲ, ನೆರವಿನಿಂದ, ತಲೆ ಎತ್ತುವಂತೆ ಬಾಳಿ– ಬದುಕಿ, ಎಲ್ಲರೊಂದಿಗೆ ಇದ್ದು, ನಮಗೆ ಕಥೆ–ಮಗ್ಗಿ ಹೇಳಿಕೊಟ್ಟು, ಮರಿಮೊಮ್ಮಕ್ಕಳನ್ನು ಆಡಿಸುತ್ತಾ, ನಗುನಗುತ್ತಲೇ ಇತ್ತೀಚಿಗಷ್ಟೇ ನಮ್ಮನ್ನು ಅಗಲಿದ ನಮ್ಮ ಹೆಣ್ಣಜ್ಜಿಯಾದ,"ಪಾರ್ವತಮ್ಮಜ್ಜಿ"ಗೆ ನನ್ನ ಈ ಬರಹ ಸಮರ್ಪಣೆ.

# ಗರ್ಭಿಣಿಯ ಸೂಕ್ತ ಆರೈಕೆಯಿಂದ ತಾಯಿ ಮರಣ ತಪ್ಪಿಸಲು ಕೈಜೋಡಿಸಿ

■ ಹಂಪಿ ಟೈಮ್ಸ್ ಬಳ್ಳಾರಿ

ಮದುವೆ ನಂತರದಲ್ಲಿ ಸೊಸೆಯು ಗಂಡನ ಮನೆತನಕ್ಕೆ ಒಂದು ಕುಡಿಯನ್ನು ನೀಡಿಲಿ ಎಂಬುದು ತಲೆತಲಾಂತರದಿಂದ ಬಂದ ನಾಣ್ನುಡಿಯಾಗಿದ್ದು, ಗರ್ಭಿಣಿಯಂದು ತಿಳಿದ ದಿನದಿಂದಲೇ ಕುಟುಂಬದ ಸದಸ್ಯರು ಗರ್ಭಿಣಿಯ ಆರೈಕೆಯನ್ನು ಮನೆಯ ಮಗಳಂತೆ ಕಾಳಜಿ ವಹಿಸಿ, ಹೆರಿಗೆಯನ್ನು ಆಸ್ಪತ್ರೆಯಲ್ಲಿ ಮಾಡಿಸುವ ಮೂಲಕ ತಾಯಿ ಮಗುವಿನ ಸುರಕ್ಷತೆಗೆ ಆದ್ಯತೆ ನೀಡಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ ರಮೇಶಬಾಬು ಅವರು ವಿನಂತಿಸಿದ್ದಾರೆ.



ಸಾಮಾನ್ಯವಾಗಿ 18 ವರ್ಷ ವಯಸ್ಸಿನ ನಂತರ ಹೆಣ್ಣು ಮಗಳಿಗೆ ಮದುವೆ ಮಾಡಿಸಬೇಕು. ಗರ್ಭಿಣಿಯಂದು ಗೊತ್ತಾದ ಕೂಡಲೆ ಆರೋಗ್ಯ ಇಲಾಖೆ ಅಥವಾ ಹತ್ತಿರದ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ನೊಂದಣಿ ಮಾಡಿಸಿಕೊಳ್ಳುವ ಮೂಲಕ ತಾಯಿಕಾರ್ಡ್ ಪಡೆಯಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಪೌಷ್ಟಿಕ ಆಹಾರ ಸೇವನೆ:**

ಪ್ರತಿದಿನ ಪೌಷ್ಟಿಕ ಆಹಾರ, ತರಕಾರಿ, ಹಸಿರು ಪಲ್ಯ, ಬೇಳೆಕಾಳು, ಮೊಳಕೆ ಕಾಳು, ಸ್ಥಳೀಯ ತರಕಾರಿಗಳು ಆಯಾ ಋತುಮಾನಕ್ಕೆ ಸಿಗುವ ಹಣ್ಣುಗಳನ್ನು ಆಹಾರದಲ್ಲಿ ಸೇವಿಸಲು ಒದಗಿಸಬೇಕು ಎಂದು ಹೇಳಿದ್ದಾರೆ.

**ಅಗತ್ಯ ಪರೀಕ್ಷೆ ಮತ್ತು ತಪಾಸಣೆ:**

ಗರ್ಭೀಣಿಯ ಸುರಕ್ಷತೆಗೆ ರಕ್ತಹೀನತೆ ತಡೆಯಲು ಪ್ರತಿದಿನ ಒಂದರಂತೆ ಕನಿಷ್ಠ 180 ಕಬ್ಬಿಣಾಂಶ ಮಾತ್ರೆಗಳ ಸೇವನೆ, ರಕ್ತಹೀನತೆ ಇದ್ದರೆ ದಿನಕ್ಕೆ ಎರಡರಂತೆ 360 ಮಾತ್ರೆಗಳನ್ನು ಸೇವಿಸುವುದು ಹಾಗೂ ನಿಯಮಿತವಾಗಿ ರಕ್ತದೊತ್ತಡ, ಸಕ್ಕರೆ ಕಾಯಿಲೆ, ತೂಕದ ಪರೀಕ್ಷೆಗಳನ್ನು ಮಾಡಿಸಿದಲ್ಲಿ ತಾಯಿಯ ಆರೋಗ್ಯದ ಸಮಸ್ಯೆಗಳಿಗೆ ಸೂಕ್ತ ಆರೈಕೆ ನೀಡಲು ಸಾಧ್ಯವಾಗುತ್ತದೆ. ಅಲ್ಲದೆ ಸಾಕಷ್ಟು ವಿಶ್ರಾಂತಿಯನ್ನು ನೀಡುವ ಮೂಲಕ ಗರ್ಭಿಣಿಗೆ ಕುಟುಂಬದ ಬೆಂಬಲವಿರುವ ಬಗ್ಗೆ ಖಾತ್ರಿಪಡಿಸಬೇಕು ಎಂದು ವಿನಂತಿಸಿದ್ದಾರೆ.

**ಗಂಡಾಂತರ ಗರ್ಭಿಣಿ ಲಕ್ಷಣಗಳು:**

ಗಂಡಾಂತರ ಗರ್ಭಿಣಿಯೆಂದು ನಿರ್ಧರಿಸಲು, 18 ವರ್ಷಕ್ಕಿಂತ ಮೊದಲು ಅಥವಾ 30 ವರ್ಷ ವಯಸ್ಸಿನ ನಂತರ ಗರ್ಭಿಣಿಯಾದಲ್ಲಿ, ರಕ್ತದಲ್ಲಿ ಕಬ್ಬಿಣಾಂಶ 9 ಕ್ಕಿಂತ ಕಡಿಮೆ ಇದ್ದಲ್ಲಿ, ಎತ್ತರ 142 ಸೆಂ.ಮೀ. ಗಿಂತ ಕಡಿಮೆ ಇದ್ದಲ್ಲಿ, ರಕ್ತದೊತ್ತಡ 140/90 ಗಿಂತ ಹೆಚ್ಚು ಇದ್ದಲ್ಲಿ, ಅವಳಿ–ಜವಳಿ ಗರ್ಭಿಣಿ ಇದ್ದಲ್ಲಿ, ಮೊದಲ ಹೆರಿಗೆ ಶಸ್ತ್ರಚಿಕಿತ್ಸೆ ಮೂಲಕವಾದಲ್ಲಿ, ಹೆಚ್‌ಐವಿ, ಹೆಚ್‌ಬಿಎಸ್‌ಎಸಿಜಿ, ಮೂರ್ಛೆರೋಗ, ಥೈರಾಯ್ಡ್, ಹೈಪೊಥೈರಾಯ್ಡ್, ರಕ್ತ ಸಂಬಂಧಿತ ಖಾಯಿಲೆಗಳಿದ್ದಲ್ಲಿ, ಗರ್ಭಕೋಶದಬೆಳವಣಿಯತೊಂದರೆಯಿದ್ದಲ್ಲಿ, ಸ್ಕ್ಯಾನಿಂಗ್‌ನಲ್ಲಿ ಮಗು ಅಡ್ಡಲಾಗಿ ಇರುವದು ಕಂಡುಬಂದಲ್ಲಿ, ಮಾಸದ ಸ್ಥಳದ ಅಡಚಣೆ (ಪ್ಲಸೇಂಟಾ ಪ್ರಿವಿಯಾ) ಮುಂತಾದ ತೊಂದರೆಗಳು ಇರುವವರು ವೈದ್ಯರ ನಿರ್ದೇಶನ, ಮಾರ್ಗದರ್ಶನ, ಪಡೆದು ಸ್ಥಳಿಯ ವೈದ್ಯಕೀಯ ಸಿಬ್ಬಂದಿಯವರ ಸಲಹೆಯಂತೆ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಬೇಕು ಎಂದು ತಿಳಿಸಿದ್ದಾರೆ.

**ನಕಲಿ ವೈದ್ಯರ ಬಳಿ ಹೆರಿಗೆ ಬೇಡ:**

ಯಾವುದೇ ವೈದ್ಯ ಪದವಿ ಪಡೆಯದೇ ವೈದ್ಯ ವೃತ್ತಿ ಮಾಡುವ ವೈದ್ಯರಲ್ಲಿ, ಮುಖ್ಯವಾಗಿ ಗ್ರಾಮೀಣ ಭಾಗದಲ್ಲಿ ಜನತೆಗೆ ಮೊಸ ಮಾಡುವ ನಕಲಿ ವೈದ್ಯರ ಬಳಿ ಹೆರಿಗೆ ಮಾಡಿಸದಂತೆ ಜಿಲ್ಲಾ ಆರೋಗ್ಯಾಧಿಕಾರಿಗಳು ವಿನಂತಿಸಿದ್ದಾರೆ.

**ಸುಸಜ್ಜಿತ ಹೆರಿಗೆ ವ್ಯವಸ್ಥೆ:**

ಸರಕಾರಿ ಆರೋಗ್ಯ ಕೇಂದ್ರಗಳಲ್ಲಿ ನುರಿತ ವೈದ್ಯರು, ಸಿಬ್ಬಂದಿಯವರು, ಯಾವುದೆ ಖಾಸಗಿ ಅಸ್ಪತ್ರೆಗಳಿಗೆ ಕಡಿಮೆ ಇಲ್ಲದ ಸುಸಜ್ಜಿತ ಹೆರಿಗೆ ಕೊಠಡಿ, ಅಗತ್ಯ ಶುಚಿತ್ವ ಕ್ರಮಗಳ ಅನುಸರಿಸುವಿಕೆ, ಮಗುವನ್ನು ಬೆಚ್ಚಗಿಡಲು ಬೆಬಿ ವಾರ್ಮರ್, ಅಗತ್ಯವೆನಿಸಿದಲ್ಲಿ ಮೇಲ್ಮಟ್ಟದ ಆಸ್ಪತ್ರೆಗೆ ಕಳುಹಿಸಲು ಆಂಬ್ಯುಲೆನ್ಸ್ ವ್ಯವಸ್ಥೆ, ಇರುವುದರಿಂದ ಮನೆಯಲ್ಲಿ ಹೆರಿಗೆ ಮಾಡಿ ಸದಂತೆ, ಸರಕಾರಿ ಆಸ್ಪತ್ರೆಯಲ್ಲಿ ಮಾಡಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ ರಮೇಶ್‌ಬಾಬು ಅವರು ಕೋರಿದ್ದಾರೆ.

# ಕನ್ನಡ ಭಾಷೆ ನಾಮಫಲಕ ಅಳವಡಿಕೆಗೆ ಸೂಚನೆ

■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ನಗರಸಭೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಂಗಡಿ, ಮುಂಗಟ್ಟುಗಳ ನಾಮಫಲಕಗಳಲ್ಲಿ ಕಡ್ಡಾಯವಾಗಿ ಕನ್ನಡ ಭಾಷೆ ಬಳಸಬೇಕು.

ಕನ್ನಡ ಭಾಷಾ ಅಭಿವೃದ್ಧಿ ಅಧಿನಿಯಮ 2023ರನ್ವಯ ಕೊಪ್ಪಳ ನಗರಸಭೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಂಗಡಿ ವ್ಯಾಪಾರ, ಉದ್ದಿಮೆ ಹಾಗೂ ಇತರೆ ವಹಿವಾಟು ನಡೆಸುವ ಮಾಲೀಕರು ತಮ್ಮ ಎಲ್ಲಾ ಅಂಗಡಿ ಮುಂಗಟ್ಟು, ಹೋಟೆಲ್‌ಗಳು, ವ್ಯವಹಾರ ಉದ್ದಿಮೆಗಳು, ಟ್ರಸ್ಟ್‌ಗಳು, ಸಮಾಲೋಚನಾ ಕೇಂದ್ರಗಳು, ಆಸ್ಪತ್ರೆಗಳು, ಪ್ರಯೋಗ ಶಾಲೆಗಳು ಹಾಗೂ ಮನೋರಂಜನಾ ಕೇಂದ್ರಗಳು ಸೇರಿದಂತೆ ಇವುಗಳ ಮೇಲೆ ಪ್ರದರ್ಶಿಸುವ ನಾಮಫಲಕಗಳಲ್ಲಿ ಕನ್ನಡ ಭಾಷೆಯು ಶೇ.60 ರಷ್ಟಿರಬೇಕು ಹಾಗೂ ಕನ್ನಡ ಭಾಷೆಯು ನಾಮಫಲಕದ ಮೇಲ್ಭಾಗದಲ್ಲಿರಬೇಕು. ಸರ್ಕಾರದ ಅಧಿಸೂಚನೆಯನ್ನು ಎಲ್ಲ ವ್ಯಾಪಾರಸ್ಥರು ಕಡ್ಡಾಯವಾಗಿ ಪಾಲಿಸಬೇಕು. ಯಾವುದೇ ವ್ಯಾಪಾರಸ್ಥರ ನಾಮಫಲಕಗಳು ಶೇ.60ರಷ್ಟು ಕನ್ನಡ ಭಾಷೆಯಲ್ಲಿ ಇರದಿದ್ದರೆ ಅಂತಹ ನಾಮಫಲಕಗಳನ್ನು 7 ದಿನಗೊಳಗಾಗಿ ಬದಲಾಯಿಸಬೇಕು. ತಪ್ಪಿದಲ್ಲಿ ನಗರಸಭೆ/ಪುರಸಭೆ ಕಾಯ್ದೆಯ ಪ್ರಕಾರ ನಾಮಫಲಕಗಳನ್ನು ತೆರವುಗೊಳಿಸಿ ದಂಡ ವಿಧಿಸಲಾಗುವುದು ಎಂದು ನಗರಸಭೆಯ ಪೌರಾಯುಕ್ತರು ತಿಳಿಸಿದ್ದಾರೆ.

# ಮಾ 9, 10ಕ್ಕೆ ಕ್ರೀಡಾ ಸ್ಪರ್ಧೆ

■ ಹಂಪಿ ಟೈಮ್ಸ್ ಕೊಪ್ಪಳ

ಮಾರ್ಚ 11 ಮತ್ತು ಮಾರ್ಚ 12ರಂದು ನಡೆಯಲಿರುವ ಪ್ರಸಿದ್ಧ ಆನೆಗೊಂದಿ ಉತ್ಸವದ ನಿಮಿತ್ತ ಮಾರ್ಚ 9 ಮತ್ತು ಮಾರ್ಚ 10ರಂದು ವಿವಿಧ ಕ್ರೀಡಾ ಸ್ಪರ್ಧೆಗಳು ನಡೆಯಲಿವೆ. ಅದೇ ಸಮಯಕ್ಕೆ ಬೆಳಗ್ಗೆ 10 ಗಂಟೆಗೆ ಪ್ರಾಥಮಿಕ ಶಾಲೆ ಆನೆಗೊಂದಿಯಲ್ಲಿ ಪುರುಷರ ಮುಕ್ತ ಹಗ್ಗ–ಜಗ್ಗಾಟ ಸ್ಪರ್ಧೆಗಳು ನಡೆಯಲಿವೆ. ಸಂಜೆ 5 ಗಂಟೆಗೆ ಪ್ರಾಥಮಿಕ ಶಾಲೆ ಆನೆಗೊಂದಿಯಲ್ಲಿ ಪುರುಷರ ಮುಕ್ತ ವಿಶೇಷಚೇತನರ ಕಬಡ್ಡಿ ಸ್ಪರ್ಧೆ ನಡೆಯಲಿವೆ. ಸಂಜೆ 5.30ಕ್ಕೆ ಪ್ರಾಥಮಿಕ ಶಾಲೆ ಆನೆಗೊಂದಿಯಲ್ಲಿ ಪುರುಷ ಹಾಗೂ ಮಹಿಳೆಯರಿಗೆ ಮುಕ್ತ ಕಬಡ್ಡಿ ಸ್ಪರ್ಧೆಗಳು ನಡೆಯಲಿವೆ. ಮಾರ್ಚ 10ರ ಬೆಳಗ್ಗೆ 6.30ಕ್ಕೆ ಪುರುಷ ಹಾಗೂ ಮಹಿಳೆಯರಿಗೆ ಮುಕ್ತ ಮ್ಯಾರಥಾನ್ ಸ್ಪರ್ಧೆ, ಬೆಳಗ್ಗೆ 8 ಗಂಟೆಗೆ ಆನೆಗೊಂದಿ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ, ಪ್ರಾಥಮಿಕ ಶಾಲೆ ಬೆಳಿಗ್ಗೆ 10.00 ಗಂಟೆಗೆ ಪುರುಷರ ಮುಕ್ತ ಹ್ಯಾಂಡಬಾಲ್ ಸ್ಪರ್ಧೆ, ಪ್ರೌಢಶಾಲೆ ಆನೆಗೊಂದಿಯಲ್ಲಿ ಮಧ್ಯಾಹ್ನ 12 ಗಂಟೆಗೆ ಪುರುಷ ಮತ್ತು ಮಹಿಳೆಯರಿಗೆ ಕುಸ್ತಿ ಪಂದ್ಯಾವಳಿ ನಡೆಯಲಿವೆ ಎಂದು ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿಠ್ಠಲ್ ಜಾಬಗೌಡರ ತಿಳಿಸಿದ್ದಾರೆ.

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಶೋಭಾಕೃತ

**08-03-2024 – ಶುಕ್ರವಾರ**

| | |
|---|---|
| ತಿಥಿ | : ತ್ರಯೋದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಶ್ರಾವಣ |
| ಯೋಗ | : ಶಿವ |
| ಕರಣ | : ಗರಜ |
| ಸೂರ್ಯೋದಯ | : 06:43:18 |
| ಸೂರ್ಯಾಸ್ತ | : 18:32:08 |
| ರಾಹು | : 11:09–12:38 |
| ಯಮಘಂಡ | : 15:35–17:04 |
| ಗುಳಿಕ | : 08:12–09:41 |

## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 07-03-2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1585.73 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 2173 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.814 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1602.24 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8037 ಕ್ಯುಸೆಕ್ |
| ಸಾಮರ್ಥ್ಯ | 24.556 ಟಿಎಂಸಿ |

# ಮಹಿಳೆಯಿಂದ ಸದೃಢ ಭಾರತ

### ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅಭಿಮತ । ಮಹಿಳೆಯರ ಆರೋಗ್ಯ ರಕ್ಷಣೆಗಿರಲಿ ಆದ್ಯತೆ ಮಹಿಳೆಯರಲ್ಲಿ ರೋಗನಿರೋಧಕ ಶಕ್ತಿ ಹೆಚ್ಚು । ಮಹಿಳೆಯರಿಗೆ ದೇವರು ಕೊಟ್ಟ ಕೊಡುಗೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಇಂದು ಎಲ್ಲಾ ಕಾಯಿಲೆಗಳಿಗೂ ಚಿಕಿತ್ಸೆ ಇದೆ. ಸಕಾಲದೊಳಗೆ ತಪಾಸಣೆಗೊಳಪಟ್ಟು ಚಿಕಿತ್ಸೆ ಪಡೆದರೆ ಗುಣಮುಖರಾಗಬಹುದು. ಮಹಿಳೆಯರಲ್ಲಿ ಅಧಿಕ ರೋಗನಿರೋಧಕ ಶಕ್ತಿ ಇದ್ದು, ಅದು ದೇವರು ಕೊಟ್ಟ ಕೊಡುಗೆಯಾಗಿದೆ. ಒತ್ತಡಗಳ ಮದ್ಯೆ ಮಹಿಳೆಯರು ತಮ್ಮ ಆರೋಗ್ಯವನ್ನು ನಿರ್ಲಕ್ಷಿಸಬಾರದು. ಮಹಿಳೆಯರು ಆರೋಗ್ಯವಾಗಿದ್ದರೆ ಮಾತ್ರ ಸದೃಢ ಆರೋಗ್ಯ ಭಾರತ ನಿರ್ಮಾಣ ಸಾಧ್ಯ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅಭಿಪ್ರಾಯಪಟ್ಟರು.

ನಗರದ ಶ್ರೀಕರಿ ಆಸ್ಪತ್ರೆಯಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಶ್ರೀಕರಿ ಆಸ್ಪತ್ರೆ ಮತ್ತು ಶ್ರೀತಾಯಮ್ಮ ಶಕ್ತಿ ಸಂಘದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಗುರುವಾರ ಉದ್ಘಾಟಿಸಿ ಮಾತನಾಡಿದರು.

ಆರೋಗ್ಯಕರ ಸಮಾಜ ನಿರ್ಮಾಣಕ್ಕಾಗಿ ಸರ್ಕಾರ ಈಗಾಗಲೇ ಅನೇಕ ಆರೋಗ್ಯ ಸೇವೆಗಳನ್ನು ಜಾರಿಗೊಳಿಸಿದೆ. ಶೈಕ್ಷಣಿಕ ಪ್ರಗತಿಗೂ ಹಲವಾರು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಸಾರ್ವಜನಿಕರ ಸಹಭಾಗಿತ್ವ ಹಾಗೂ ಖಾಸಗಿ ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆಗಳು ಸರ್ಕಾರದೊಂದಿಗೆ ಕೈಜೋಡಿಸಿದಾಗ ಸಮಾಜದಲ್ಲಿ ಸಮಗ್ರ ಬದಲಾವಣೆ ತರಲು ಸಾಧ್ಯ. ವಿಜಯನಗರ ಜಿಲ್ಲೆಯಲ್ಲಿ ಅನೇಕರು ಸೇವಾ ಮನೋಭಾವನೆ ಬೆಳೆಸಿಕೊಂಡು ಆರೋಗ್ಯ ಮತ್ತು ಶಿಕ್ಷಣ ಸೇವೆ ನೀಡುತ್ತಿರುವುದು ಮಾದರಿ ಕಾರ್ಯವಾಗಿವೆ. ಬಡ ಮತ್ತು ಮದ್ಯಮ ವರ್ಗದವರಿಗೆ ಚಿಕಿತ್ಸೆ ಮತ್ತು ಆರೋಗ್ಯ ತಪಾಸಣೆ ದುಬಾರಿಯಾಗಿರುವ ಈ ದಿನಗಳಲ್ಲಿ ಶ್ರೀಕರಿ ಆಸ್ಪತ್ರೆ ಉಚಿತ ಆರೋಗ್ಯ ತಪಾಸಣೆ ಮೂಲಕ ಆರೋಗ್ಯ ಸೇವೆ ನೀಡುತ್ತಿರುವುದು ಉತ್ತಮ ಕಾರ್ಯಕವಾಗಿದೆ. ಈ ಹಿಂದೆ ಲಕ್ಷ ರೋಗಿಗಳ ಪೈಕಿ ಒಬ್ಬರಲ್ಲಿ ಕ್ಯಾನ್ಸರ್ ಪತ್ತೆಯಾಗುತ್ತಿತ್ತು. ಆದರೆ ಈಗ ಸಾವಿರ ರೋಗಿಗಳಲ್ಲಿ ಒಬ್ಬರಿಗೆ ಕ್ಯಾನ್ಸರ್ ಪತ್ತೆಯಾಗುತ್ತಿದೆ. ಕ್ಯಾನ್ಸರ್ ಇದೆ ಎಂದ ಮಾತ್ರಕ್ಕೆ ಆತಂಕ ಪಡಬೇಕಿಲ್ಲ. ಆರಂಭದಲ್ಲೆ ವೈದ್ಯರನ್ನು ಸಂಪರ್ಕಿಸಿ ಸೂಕ್ತ ಚಿಕಿತ್ಸೆ ಪಡೆದರೆ ಎಲ್ಲಾ ರೋಗಗಳನ್ನು ಗುಣಪಡಿಸಲು ಸಾಧ್ಯವಿದೆ. ಆರೋಗ್ಯ ಶಿಬಿರಗಳು ನಿರಂತರವಾಗಿ ನಡೆಯಲಿ ಎಂದರು.



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್. ಮಾತನಾಡಿ, ದುಬಾರಿ ವೆಚ್ಚದ ಆರೋಗ್ಯ ಸೇವೆಗಳು ಇರುವ ಈ ಕಾಲದಲ್ಲೂ ಉಚಿತ ಆರೋಗ್ಯ ತಪಾಸಣೆ ಶಿಬಿರಗಳು ನಡೆಸುತ್ತಿರುವುದು ಶ್ಲಾಘನೀಯ. ಮಹಿಳೆಯರು ಆರೋಗ್ಯವಾಗಿದ್ದರೆ ಅವರ ಕುಟುಂಬವೇ ನೆಮ್ಮದಿಯಿಂದ ಇರಲು ಸಾಧ್ಯ ಎಂದರು.

ವೈದ್ಯೆ ಎಸ್.ಗಂಗೋತ್ರಿ ಮಾತನಾಡಿ, ಆರು ವರ್ಷಗಳಿಂದ ಶ್ರೀಕರಿ ಆಸ್ಪತ್ರೆ ಆರೋಗ್ಯ ತಪಾಸಣಾ ಶಿಬಿರಗಳ ಮೂಲಕ ಸೇವೆ ನೀಡುತ್ತಾ ಬಂದಿದೆ. ಮಹಿಳೆಯರು ನಾನಾ ಆರೋಗ್ಯ ಸಮಸ್ಯೆಗಳಿಗೆ ಸಿಲುಕಿರುತ್ತಾರೆ. ಒಂದೇ ಸೂರಿನಡಿ ನಾನಾ ರೋಗಳಿಗೆ ಆರೋಗ್ಯ ಸೇವೆ ಒದಗಿಸುವ ದೃಷ್ಠಿಯಿಂದ ಮಹಿಳಾ ದಿನಾಚರಣೆ ಅಂಗವಾಗಿ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿದೆ. ಅಗತ್ಯವಿರುವ ಕಡೆ ಆರೋಗ್ಯ ಶಿಬಿರ ಆಯೋಜಿಸಲು ಶ್ರೀಕರಿ ತಂಡ ಸಿದ್ಧವಿದೆ ಎಂದರು.

ತಾಯಮ್ಮ ಶಕ್ತಿ ಸಂಘದ ಅಧ್ಯಕ್ಷೆ ಕವಿತಾ ಈಶ್ವರಸಿಂಗ್ ಮಾತನಾಡಿ, ಮಹಿಳೆಯರು ಅಬಲೆ ಅಲ್ಲ ಸಬಲೆ ಎಂದು ಸಾಬೀತು ಮಾಡಿದ್ದಾಳೆ. ಮಹಿಳೆಯರನ್ನು ಗೌರವದಿಂದ ಕಾಣುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಆರೋಗ್ಯ ಇಲಾಖೆಯ ಆರ್‌ಸಿಎಚ್‌ಒ ಜಂಬಯ್ಯನಾಯಕ ಮಾತನಾಡಿದರು. ವೈದ್ಯರಾದ ಪ್ರವೀಣ್ ಆರ್ ಅರಕೇರಿ, ನವೀನ್ ಕುಮಾರ್ ಇತರರು ಇದ್ದರು. ಶಿಬಿರದಲ್ಲಿ ಗರ್ಭಿಣಿಯರಿಗೆ ಬಂಜೆತನ ಪರೀಕ್ಷೆ, ಚಿಕಿತ್ಸೆ, ಪ್ಯಾಪ್ ಸ್ಮೀಯರ್, ಮಮೊಗ್ರಫಿ, ಮೂಳೆ ಖನಿಜ ಸಾಂದ್ರತೆ, ಕಣ್ಣುಗಳ ತಪಾಸಣೆ, ಹೃದಯ ತಪಾಸಣೆ, ಇಸಿಜಿ ಮತ್ತು 2D echo ತಪಾಸಣೆ ನಡೆಸಿ ಈಗಾಗಲೇ 340ಕ್ಕೂ ಅಧಿಕ ರೋಗಿಗಳಿಗೆ ಚಿಕಿತ್ಸೆ, ಸಲಹೆ ನೀಡಿದರು.









## ನಾರಾ ಪ್ರತಾಪ್ ರೆಡ್ಡಿಗೆ ಎಎಪಿ ಬೆಂಬಲ

ಮೊದಲ ಪುಟದಿಂದ

ಈ ಭಾಗಕ್ಕೆ ಅವರ ಕೊಡುಗೆ ಶೂನ್ಯ ಎಂದು ಆರೋಪಿಸಿದರು. ಪದವೀಧರರು, ಶಿಕ್ಷಕರು ಹಾಗೂ ನೌಕರರು ಹಿತಕಾಯುವುದಕ್ಕಾಗಿ ಈ ಬಾರಿ ಮತ್ತೊಮ್ಮೆ ಸ್ಪರ್ಧಿಸಲಿಚ್ಛಿಸಿದ್ದೇನೆ. ಈ ಬಾರಿ ಆಯ್ಕೆಯಾದರೆ, ದೆಹಲಿ ಮಾದರಿಯಲ್ಲಿ ಸರ್ಕಾರಿ ಶಾಲೆ, ಸರ್ಕಾರಿ ಆಸ್ಪತ್ರೆಗಳ ಅಭಿವೃದ್ಧಿಗೊಳಿಸಲಾಗುವುದು. ಸಾಮಾನ್ಯರೂ ಉನ್ನತ ದರ್ಜೆಯ ಸೌಲಭ್ಯಗಳನ್ನು ಒದಗಿಸುವ ಕನಸು ಕಟ್ಟಿಕೊಂಡಿದ್ದೇನೆ ಎಂದು ಹೇಳಿದರು. ಕಳೆದ ಚುನಾವಣೆಯಲ್ಲಿ ನನ್ನ ಪರವಾಗಿ ಚಲಾವಣೆಯಾಗಿದ್ದ ಮತಗಳಲ್ಲಿ 3500 ಮತಗಳು ಕುಲಗೆಟ್ಟಿದ್ದವು. ಇದು ಮೇಲ್ಮನೆ ಚುನಾವಣೆಯ ಮತದಾನ ಪದ್ಧತಿ ಕುರಿತು ಜನರಿಗೆ ಜಾಗೃತಿ ಇಲ್ಲದಿರುವುದನ್ನು ತೋರಿಸುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಸ್ವೀಪ್ ಸಮಿತಿ ಮೂಲಕ ಪ್ರಾಶಸ್ತ್ಯ ಮತದಾನ ಕುರಿತು ಮತದಾರರಲ್ಲಿ ಅರಿವು ಮೂಡಿಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಎಎಪಿ ರಾಜ್ಯ ಉಪಾಧ್ಯಕ್ಷ ರುದ್ರಯ್ಯ ನವಲಿ ಹಿರೇಮಠ, ಬಳ್ಳಾರಿ ಖಾಸಗಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಮರಿಸ್ವಾಮಿ ರೆಡ್ಡಿ ಉಪಸ್ಥಿತರಿದ್ದರು.

## ಹಂಪಿಗಿಲ್ಲ ಪ್ರವಾಸಿಗರ ಬರ

ಮೊದಲ ಪುಟದಿಂದ

ಕೇಂದ್ರ ಸರ್ಕಾರ ಪ್ರವಾಸಿಗರಿಗೆ ಮೂಲಭೂತ ಸೌಲಭ್ಯ ಕಲ್ಪಿಸಲೇಂದೇ ಶೌಚಾಲಯ ಸೇರಿದಂತೆ ಅಗತ್ಯ ಸೌಲಭ್ಯ ಕಲ್ಪಿಸಲು ದಿಟ್ಟ ಹೆಜ್ಜೆ ಇಟ್ಟಿದೆ. ಇಲ್ಲಿಂದ ಮತ್ತಷ್ಟು ಅಭಿವೃದ್ಧಿ ಕಾರ್ಯಗಳು ಹಂಪಿಯಲ್ಲಿ ನಡೆಯಲಿವೆ. ಈಗಾಗಲೇ ಹಂಪಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಜೊತೆಗೆ ಮೂಲಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ. ಬೀದಿಬದಿ ವ್ಯಾಪಾರಿಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಲಾಗುತ್ತಿದೆ. ಜಿಲ್ಲೆಗೆ ನಿಷ್ಠಾವಂತ ಅಧಿಕಾರಿಗಳು ಬಂದಿರುವುದರಿಂದ ಎಲ್ಲ ಕಾರ್ಯಗಳು ಸುಗಮವಾಗಿ ನಡೆಯುತ್ತಿವೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ ಮಾತನಾಡಿ, ಪುರಾತತ್ವ ಇಲಾಖೆಯ ಒಪ್ಪಿಗೆಯ ಮೇರೆಗೆ, ಬೇರೆ ಯಾವುದೇ ಇಲಾಖೆಗೆ ತೊಂದರೆಯಾಗದಂತೆ 3 ವಿಧದ 20 ಟ್ರಾವೆಲರ್ ನೂಕ್‌ಗಳಿಗೆ ಅನುಮೋದನೆ ಕೊಡಲಾಗಿದೆ. ದೇವಸ್ಥಾನದಿಂದ ಆನೆಗುಂದಿಯವರೆಗೆ ಟ್ರಾವೆಲರ್ ನೂಕ್‌ಗಳನ್ನು ಮಾಡಲು ತೀರ್ಮಾನಿಸಲಾಗಿದೆ. ದೇವಸ್ಥಾನ ಮತ್ತು ಪ್ರವಾಸಿ ತಾಣಗಳಲ್ಲಿ, ಭಕ್ತಾಧಿಗಳು, ಪ್ರವಾಸಿಗರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದು, ಎಲ್ಲರಿಗೂ ಮೂಲಭೂತ ಸೌಕರ್ಯ ಒದಗಿಸುವುದು ನಮ್ಮ ಆದ್ಯ ಕರ್ತವ್ಯ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾಡಿರಿ ಶ್ರೀಹರಿಬಾಬು ಬಿ.ಎಲ್., ಸಹಾಯಕ ಆಯುಕ್ತರಾದ ಮೊಹಮ್ಮದ್ ಅಲಿ ಅಕ್ರಂ ಷಾ, ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಪ್ರಭುಲಿಂಗ ಎಸ್. ತಾಳಿಕೇರಿ, ತಹಸೀಲ್ದಾರರಾದ ಶೃತಿ ಎಂ.ಎಂ, ಹಂಪಿ ಗ್ರಾಮ ಪಂಚಾಯಿತಿಯ ಅಧ್ಯಕ್ಷೆ ರಜಿನಿ ಷಣ್ಮುಖ ಗೌಡ, ಉಪಾಧ್ಯಕ್ಷರು ಸದಸ್ಯರು, ಮಾರ್ಗದರ್ಶಕರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸಿ

### ಶಾಸಕ ಡಾ.ಎನ್.ಟಿ.ಶ್ರೀನಿವಾಸ ಮನವಿ । ಸರ್ಕಾರ 550 ಕೋಟಿ ಅನುದಾನ ನೀಡಿದೆ ಹಿಂದುಳಿದ ಕೂಡ್ಲಿಗಿ ಕ್ಷೇತ್ರವನ್ನು ಮಾದರಿ ಕ್ಷೇತ್ರವಾಗಿಸಲು ಬದ್ಧ ಸಹಕಾರ ನೀಡಿ ಗ್ಯಾರಂಟಿಗಳಿಗೆ ಹಣವಿಲ್ಲವೆನ್ನುವ ವಿರೋಧಪಕ್ಷಗಳು ಈಗಲಾದರೂ ಕಣ್ತೆರೆದು ನೋಡಲಿ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಪರಿಶಿಷ್ಟ ಜಾತಿ ಜನಾಂಗದವರೇ ಹೆಚ್ಚಾಗಿರುವ ಈ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿಸಲು ಪಣ ತೊಟ್ಟಿರುವೆ ಅದಕ್ಕೆ ಎಲ್ಲರ ಸಹಕಾರ ಅಗತ್ಯ ಎಂದು ಶಾಸಕ ಡಾ.ಎನ್. ಟಿ.ಶ್ರೀನಿವಾಸ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದ ಆವರಣದಲ್ಲಿ ಗುರುವಾರ ವಿವಿಧ ಅನುದಾನಗಳ ಅಡಿಯಲ್ಲಿ ಸುಮಾರು 550 ಕೋಟಿ ಕಾಮಾಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದರು. ಕಳೆದ ಚುನಾವಣೆಯಲ್ಲಿ ಆಯ್ಕೆಯಾದ ನಂತರ ಈ ಕ್ಷೇತ್ರದಲ್ಲಿ ಕಾಲಿಗೆ ಚಕ್ರ ಕಟ್ಟಿಕೊಂಡು ತಿರುಗಾಡಿ, ಜನರ ಸಮಸ್ಯೆಗಳನ್ನು ಅರಿತಿದ್ದೇನೆ. ಅದಕ್ಕೆ ಪೂರಕವಾಗಿ ಅಭಿವೃದ್ಧಿ ಪಡಿಸಲು ಜಿಲ್ಲಾ ಖನಿಜ ನಿಧಿ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಯೋಜನೆ ಸೇರಿದಂತೆ ಇತರೆ ಅನುದಾನಗಳ ಅಡಿಯಲ್ಲಿ ಸುಮಾರು 550 ಕೋಟಿ ಅನುದಾನವನ್ನು ಸರ್ಕಾರ ನೀಡಿದೆ. ಮುಂಬರುವ ದಿನಗಳಲ್ಲಿ ಹಂತ ಹಂತವಾಗಿ ಕಾಮಾಗಾರಿ ಕೈಗೆತ್ತಿಕೊಂಡು ಹಿಂದುಳಿದ ತಾಲೂಕಿನ ಸಮಸ್ಯೆಗಳನ್ನು ಬಗೆಹರಿಸುವೆ ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆಗೆ ಹಣ ಹೊಂದಿಸಲು ಸಾಕಗುವುದಿಲ್ಲ ಇದರಿಂದ ಸರ್ಕಾರದಲ್ಲಿ ಹಣ ಇಲ್ಲ ಎಂದು ಪ್ರತಿ ಪಕ್ಷಗಳು ಬೊಬ್ಬೆ ಹೊಡೆಯುತ್ತಿವೆ. ಆದರೆ ಕಾಂಗ್ರೆಸ್ ಸರ್ಕಾರ ಹಿಂದುಳಿದ ಈ ತಾಲೂಕಿಗೆ ಹಣದ ಹೊಳೆಯನ್ನೆ ಹರಿಸಿದೆ. ಇದರಿಂದ ಜನರಿಗೆ ಬೇಕಾದ ಮೂಲ ಸೌಕರ್ಯಗಳನ್ನು ಒದಗಿಸಲು ಮುಂದಾಗುವೆ. ಕ್ಷೇತ್ರದ ರೈತರಿಗೆ ಅನುಕೂಲವಾಗಲು ಕೃಷಿ ಮಾರುಕಟ್ಟೆಗೆ ಸೌಕರ್ಯ ಕಲ್ಪಿಸುವೆ. ಹುಣಸೇ ಹಣ್ಣಿನ ವಹಿವಾಟು ನಡೆಸಲು ಮಾರುಕಟ್ಟೆ ಜತೆ ಶೀಥಲಿಕರಣ ಗೋದಾಮು ನಿರ್ಮಾಣ ಮಾಡುಲು ಯೋಜನೆ ಸಿದ್ದಪಡಿಸಿರುವೆ. 74 ಕೆರೆಗಳಿಗೆ ಮಾರ್ಚ್ ಅಂತ್ಯದ ವೇಳೆಗೆ ಲೋಕಾರ್ಪಣೆ ಮಾಡುವೆ. ಗ್ರಾಮೀಣ ಕುಡಿಯುವ ನೀರಿಗೆ ಸುಮಾರು 121 ಕೋಟಿ ವೆಚ್ಚದಲ್ಲಿ ಕಾಮಾಗಾರಿ ಆರಂಭವಾಗಿದೆ. ಹೂಡೇಂ ವಿದ್ಯುತ್ ಪ್ರಸರಣ ಕೇಂದ್ರಕ್ಕೆ 11 ಕೋಟಿ ನೀಡಿ ಕಾಮಾಗಾರಿ ಮುಗಿಯುವ ಹಂತದಲ್ಲಿದೆ. ಕ್ಷೇತ್ರದ 218 ಸರ್ಕಾರಿ ಶಾಲೆಗಳ ಮಕ್ಕಳಿಗೆ ಶುದ್ದ ನೀರಿನ ಘಟಕ ಮಂಜೂರಾತಿ ದೊರೆತಿದೆ. ಬರ ಆವರಿಸಿರುವ ಕಾರಣ ಕ್ಷೇತ್ರದ ಎಲ್ಲಾ ಗ್ರಾಮಗಳಲ್ಲಿಯೂ ಜನ, ಜಾನುವಾರುಗಳಿಗೆ ನೀರಿನ ತೊಂದರೆ ಎದುರಾಗದಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದು, ತಾಲೂಕು ಹಾಗೂ ಗ್ರಾಮ ಆಡಳಿತ ಸನ್ನದ್ದವಾಗಿದ್ದು ಎಲ್ಲಿಯೂ ಅಡಚಣೆಯಾಗದಂತೆ ಕಾರ್ಯ ನಿರ್ವಹಿಸಲಿದೆ ಎಂದರು. ಮೂರು ವಸತಿ ಶಾಲೆಗಳು ಆರಂಭಿಸಿದ್ದು, ಗ್ರಾಮೀಣ, ಜಿಲ್ಲಾ ಹಾಗೂ ರಾಜ್ಯ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಯೋಜನೆ ರೂಪಿಸಿ ಅನುದಾನ ಮಂಜೂರಾಗಿದೆ. ಇನ್ನೂ ಜನರಿಗೆ ಉತ್ತಮ ಆರೋಗ್ಯ ನೀಡುವ ದೃಷ್ಟಿಯಿಂದ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಮೂರು ಕೋಟಿ ಹಾಗೂ ಕ್ಷೇತ್ರದ ಎಲ್ಲಾ ಉಪ ಕೇಂದ್ರಗಳನ್ನು ಅಭಿವೃದ್ಧಿ ಪಡಿಸಲು ಅಂದಾಜು 31 ಕೋಟಿ ಅನುದಾನ ನೀಡಲಾಗಿದೆ ಎಂದು ತಿಳಿಸಿದರು. ಗ್ರಾಮೀಣ ಬಡ ವಿಧ್ಯಾರ್ಥಿಗಳಿಗೆ ಸಂಚಾರಿ ನೇತ್ರಾ ಚಿಕಿತ್ಸಾ ವಾಹನ ಮಂಜೂರಾಗಿದ್ದು, ಕ್ಷೇತ್ರದ ಎಲ್ಲಾ ಸರ್ಕಾರಿ ಶಾಲೆಗಳಿಗೆ ಈ ವಾಹನ ಹೋಗಿ ಕಣ್ಣಿನ ಚಿಕಿತ್ಸೆ ನೀಡುವುದು ಎಂದು ತಿಳಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಗುರುಸಿದ್ದನ ಗೌಡ, ಜಿಲ್ಲಾ ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಗುಂಡುಮುಣುಗು ತಿಪ್ಪೇಸ್ವಾಮಿ, ಸಮಾಜ ಸೇವಕ ಎನ್.ಟಿ.ತಮ್ಮಣ್ಣ, ಹೊಸಹಳ್ಳಿ ಬ್ಲಾಕ್ ಅಧ್ಯಕ್ಷ ಕುಮಾರ ಗೌಡ, ಸಾವಜ್ಜಿ ರಾಜೇಂದ ಪ್ರಸಾದ್, ನಾಗಮಣಿ ಜಿಂಕಾಲ್, ಕೆಪಿಸಿಸಿ ಕಾರ್ಯದರ್ಶಿ ಹಿರೇಕುಂಬಳಗುಂಟೆ ಉಮೇಶ್, ಕಾಂಗ್ರೆಸ್ ಜಿಲ್ಲಾ ಎಸ್ಟಿ ಘಟಕದ ಜಿಲ್ಲಾಧ್ಯಕ್ಷ ಕಾವಲಿ ಶಿವಪ್ಪನಾಯಕ, ಉದಯ ಜನ್ನು, ಟಿ.ಜಿ.ಮಲ್ಲಿಕಾರ್ಜುನ ಗೌಡ, ಶಿವಪುರ ರಾಜು,
ಸೂಲದಹಳ್ಳಿ ಸಿದ್ದಣ್ಣ ಸೇರಿದಂತೆ ಅನೇಕರು ಇದ್ದರು.

## ಪ್ರಚಾರ ಸಾಮಾಗ್ರಿ ಮುದ್ರಣಕ್ಕೆ ಪೂರ್ವಾನುಮತಿ ಕಡ್ಡಾಯ

### ಜಿಲ್ಲಾಧಿಕಾರಿ ದಿವಾಕರ ಖಡಕ್ ಸೂಚನೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಲೋಕಸಭಾ ಚುನಾವಣೆ-2024ರ ಹಿನ್ನೆಲೆಯಲ್ಲಿ, ಜಿಲ್ಲಾ ಚುನಾವಣಾಧಿಕಾರಿ ಎಂ.ಎಸ್.ದಿವಾಕರ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಪ್ರಿಂಟಿಂಗ್ ಪ್ರೆಸ್ ಮಾಲೀಕರ ಹಾಗೂ ಕೇಬಲ್ ಟಿವಿ ಆಪರೇಟರಗಳ ಸಭೆ ಗುರುವಾರ ಜರುಗಿತು.

ಜಿಲ್ಲಾಧಿಕಾರಿ ಮಾತನಾಡಿ, ರಾಜಕೀಯ ಪ್ರಚಾರ ಸಾಮಗ್ರಿಗಳನ್ನು ಮುದ್ರಿಸುವಾಗ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಮುದ್ರಕರ ಮತ್ತು ಮುದ್ರಣಕ್ಕೆ ಆದೇಶ ನೀಡಿದವರ ಹೆಸರನ್ನು ಕರಪತ್ರಗಳ ಮೇಲೆ ಸ್ಪಷ್ಟವಾಗಿ ನಮೂದಿಸಬೇಕು. ರಾಜಕೀಯ ಪಕ್ಷಗಳು ಮತ್ತು ಸ್ಪರ್ಧಿಸಿದ ಅಭ್ಯರ್ಥಿಗಳು ಎಷ್ಟು ಪ್ರತಿಗಳನ್ನು ಮುದ್ರಿಸಿದ್ದಾರೆ ಎಂಬ ಮಾಹಿತಿಯನ್ನು ಕಡ್ಡಾಯವಾಗಿ ನಮೂದಿಸಬೇಕು. ಕಾರ್ಯಾದೇಶದಲ್ಲಿ ತಿಳಿಸಿದಂತೆ ಮುದ್ರಣವಾದ ಬಗ್ಗೆ ಮಾಹಿತಿಯನ್ನು ಆರ್‌ಓ ಕಚೇರಿಗೆ ಮತ್ತು ಹೊಸಪೇಟೆಯಲ್ಲಿನ ಜಿಲ್ಲಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು. ಮುದ್ರಣಕ್ಕೆ ಆದೇಶ ನೀಡಿದ ವ್ಯಕ್ತಿಯಿಂದ ಕಡ್ಡಾಯವಾಗಿ ಘೋಷಣೆಯನ್ನು ದ್ವಿಪ್ರತಿಯಲ್ಲಿ ಪಡೆದುಕೊಳ್ಳಬೇಕು. ಈ ಘೋಷಣೆಗೆ ಸಾಕ್ಷಿದಾರರ ಸಹಿ ಇರಬೇಕು. ಕರ ಪತ್ರ ಮುದ್ರಣ ಮೊದಲು ಕಡ್ಡಾಯವಾಗಿ ಪ್ರತಿ ಮುದ್ರಣಾಲಯದ ಮಾಲೀಕರು ಘೋಷಣೆಯನ್ನು ಪಡೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ನಿಯಮಗಳನ್ನು ಅನುಸರಿಸದೇ ಕರಪತ್ರ ಮುದ್ರಣ ಮಾಡಿದಲ್ಲಿ ಮತ್ತು ಪ್ರಚಾರ ಸಾಮಗ್ರಿ ಮುದ್ರಣಕ್ಕೆ ಸಂಬಂಧಿಸಿದಂತೆ ವಿಧಿಸಿದ ನಿಯಮಗಳನ್ನು ಪಾಲನೇ ಮಾಡದಿದ್ದಲ್ಲಿ ಪ್ರಜಾಪ್ರತಿನಿಧಿ ಕಾಯಿದೆ 1951 ಸೆಕ್ಷನ್ 127ಎ ರನ್ವಯ ಕ್ರಮಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ಇದೆ ವೇಳೆ ಎಚ್ಚರಿಕೆ ನೀಡಿದರು.

ಸ್ಥಳೀಯ ಕೇಬಲ್ ಆಪರೇಟರಗಳು ಯಾವುದೇ ಪಕ್ಷದ ಅಥವಾ ಅಭ್ಯರ್ಥಿಯ ಜಾಹೀರಾತು ಬಳಸುವಾಗ ಜಿಲ್ಲಾಮಟ್ಟದ ಎಂಸಿಎಂಸಿ ಕಮೀಟಿಯಯಿಂದ ಪೂರ್ವಾನುಮತಿಯನ್ನು ಕಡ್ಡಾಯವಾಗಿ ಪಡೆಯಬೇಕು. ಪೂರ್ವಾನುಮತಿ ಪಡೆಯದೇ ಯಾವುದೇ ಜಾಹೀರಾತನ್ನು ಬಿತ್ತರಿಸಬಾರದು. ತಮ್ಮ ತಮ್ಮ ಚಾನೆಲ್ ಮತ್ತು ಕೇಬಲ್ ನೆಟ್‌ವರ್ಕ್‌ನಲ್ಲಿ ಬಿತ್ತರಿಸಿದ ಎಲ್ಲ ಜಾಹೀರಾತುಗಳ ಮಾಹಿತಿ ಮತ್ತು ಅದಕ್ಕೆ ವಿಧಿಸಲಾಗಿರುವ ವೆಚ್ಚದ ವಿವರಗಳನ್ನು ಕಡ್ಡಾಯವಾಗಿ ಜಿಲ್ಲಾ ಚುನಾವಣಾಧಿಕಾರಿಗಳ ಕಾರ್ಯಾಲಯಕ್ಕೆ ಸಲ್ಲಿಸಬೇಕು ಎಂದು ಎಲ್ಲ ಕೇಬಲ್ ಆಪರೇಟರಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅನುರಾಧ ಜಿ. ಹಾಗೂ ವಿಜಯನಗರ ಜಿಲ್ಲಾ ವಾಪ್ತಿಯ ಕೇಬಲ್ ಆಪರೇಟರಗಳು ಮತ್ತು ಮುದ್ರಣ ಯಂತ್ರಗಳ ಮಾಲೀಕರು ಇದ್ದರು.

# ಮಾರ್ಚ 9ರಂದು ವಿದ್ಯುತ್ ವ್ಯತ್ಯಯ

■ **ಹಂಪಿ ಟೈಮ್ಸ್ ಹೊಸಪೇಟೆ**



ತಾಲೂಕಿನ ಕಮಲಾಪುರ 110/11ಕೆವಿ ವಿದ್ಯುತ್? ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಇರುವುದರಿಂದ ಮಾ.9ರಂದು ಬೆಳಗ್ಗೆ 9ರಿಂದ ಸಂಜೆ 6ಗಂಟೆವರೆಗೆ ಕಮಲಾಪುರ ಶಾಖಾ ವ್ಯಾಪ್ತಿಗೆ ಬರುವ ಕಮಲಾಪುರ ಪಟ್ಟಣ ಪಂಚಾಯಿತಿ, ಬುಕ್ಕಸಾಗರ, ಸೀತಾರಾಮ ತಾಂಡಾ, ಮಲಪನಗುಡಿ, ಹಂಪಿ, ಪಾಪಿನಾಯಕನಳ್ಳಿ, ಗಾದಿಗನೂರು, ಬೈಲುವದ್ದಿಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಗ್ರಾಮಗಳಿಗೆ ಹಾಗೂ ನೀರಾವರಿ ಪಂಪ್?ಸೆಟ್? ರೈತರಿಗೆ ವಿದ್ಯುತ್? ಸಮಸ್ಯೆ ಆಗಲಿದೆ. ಹೀಗಾಗಿ ಎಲ್ಲ ಸಾರ್ವಕನಿಕರು ಮತ್ತು ರೈತರು ಸಹಕರಿಸಬೇಕು ಎಂದು ಉಪವಿಭಾಗದ ಸಹಾಯಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಬೇಕಾಗಿದ್ದಾರೆ**

ಪಾರ್ಟ್ ಟೈಮ್ / ಫುಲ್ ಟೈಮ್ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಸಂಪರ್ಕಿಸಿ

**ಕುಶಾಲ್ ಟೆಲಿ ಮೊಬೈಲ್ಸ್**

Wholesale Dealers in All Brands second hand Mobiles

ರಾಮಾ ಟಾಕೀಸ್ ಹತ್ತಿರ, ಭಾರತ್ ಪೆಟ್ರೋಲ್ ಬಂಕ್ ಎದುರುಗಡೆ, ಹೊಸಪೇಟೆ-583201

M:99029 00085

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA